ಮಾನಸಿ

ಆಗಸ್ಟ್ 2003 ತಿಂಗಳ ಪತ್ರಿಕೆ

- ಆದಿವಾಸಿ ಹೋರಾಟ ಸೌಹಾರ್ದ ಸಭೆ - ಒಂದು ವರದಿ
- ಆದಿವಾಸಿಗಳ ಸಮಸ್ಯೆಗಳು - ಆದಿವಾಸಿ ಹೋರಾಟಗಳು : ಒಂದು ಸೌಹಾರ್ದತಾ ಸಭೆ
- ಕುದುರೆಮುಖ ರಾಷ್ಟ್ರೀಯ ಉದ್ಯಾನ ವಿರೋಧಿ ಒಕ್ಕೂಟ-ಚಿಕ್ಕಮಗಳೂರು (ಪ್ರಗತಿಪರರಲ್ಲಿ ಒಂದು ಮನವಿ)
- ಅಮೆರಿಕದಲ್ಲಿ ಕೌಟುಂಬಿಕ ಹಿಂಸೆ

ಮಾನಸ

ತಿಂಗಳ ಪತ್ರಿಕೆ ಆಗಸ್ಟ್ 2003
ಸಂಪುಟ 18 ಸಂಚಿಕೆ : 7

ವಿಳಾಸ
“ **ಮಾನಸ** ” ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ - ಪೋಸ್ಟ್
ಬೆಂಗಳೂರು - 560 067
ಇ-ಮೈಲ್ : manasapathrike@yahoo.co.in

ಸೂಚನೆ : ಸೂಚನೆ : ಬಿಡಿಪ್ರತಿ 10-00 ರೂ.
ವಾರ್ಷಿಕ ಚಂದಾ 100-00 ರೂ.
ಸಂಸ್ಥೆಗಳಿಗೆ 150-00 ರೂ.

✸ ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ...

ಮೈಸೂರು

ಮೈಸೂರಿನಲ್ಲಿರುವ ಓದುಗರು ಮಾನಸ ಪ್ರತಿಗಳಿಗಾಗಿ ಹಾಗೂ ಚಂದಾ ನವೀಕರಣಕ್ಕಾಗಿ ಸಂಪರ್ಕಿಸಿ
ವೆಂ.ವನಜ : 2329, 12ನೇ ಮೇನ್, 2 ನೇ ಹಂತ ವಿಜಯನಗರ, ಮೈಸೂರು - 570 017

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ,
ಪಂಚಾಯಿತಿ ರಸ್ತೆ, ಕಾಡುಗೋಡಿ - ಅಂಚೆ, ಬೆಂಗಳೂರು - 560 067



ಸಂಪಾದಕೀಯ

ಹೆಣ್ಣು ಭ್ರೂಣಹತ್ಯೆಯು ಕಾನೂನು ಬಾಹಿರವಾಗಿದ್ದರು ಅಬಾದಿತವಾಗಿ ನಡೆದುಕೊಂಡು ಬಂದಿರುವುದು ಆತಂಕಕ್ಕೆ ಒಳಗಾಗುವ ಸಂಗತಿಯಾಗಿದೆ. ಸ್ಕ್ಯಾನಿಂಗ್ ಮಾಡುವುದರ ಮೂಲಕ ಹೆಣ್ಣು ಭ್ರೂಣವೆಂಬ ಮಾಹಿತಿಯನ್ನು ಪಡೆದು ಗರ್ಭ ಪಾತ ಮಾಡಿಸಿಕೊಳ್ಳುವ ಸೌಖ್ಯೆ ತೀವ್ರಗತಿಯಲ್ಲಿ ಹೆಚ್ಚಾಗುತ್ತಿದೆ.

2001 ರ ಜನಸಂಖ್ಯೆಯ ಸಮೀಕ್ಷೆಯಿಂದ 'ಗಂಡು ಮಕ್ಕಳಿಗೆ ನೀಡುವ ಆದ್ಯತೆಯು ಸ್ಪಷ್ಟವಾಗಿದೆ. ಹರ್ಯಾನ, ಮಧ್ಯಪ್ರದೇಶ, ದೆಹಲಿ, ಹಿಮಾಚಲಪ್ರದೇಶ ವಿಶೇಷವಾಗಿ ಪಂಜಾಬ್‌ನಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿದೆ. ಉತ್ತರ ಪ್ರದೇಶದ ರಾಜ್ಯಗಳಲ್ಲಿ ಹೆಣ್ಣುಭ್ರೂಣವನ್ನು ಗರ್ಭ ಪಾತ ಮಾಡುವ ಕ್ಲಿನಿಕ್‌ಗಳು ಜನಪ್ರಿಯವಾಗಿದ್ದು, ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆಯಾಗುವುದಕ್ಕೆ ಕಾರಣವಾಗಿದೆ.

ಕರ್ನಾಟಕದಲ್ಲಿ ವಿಶೇಷವಾಗಿ ಬೆಂಗಳೂರು ಗ್ರಾಮಾಂತರದಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ. ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ 1000 ಕ್ಕೆ 893 ಮಹಿಳೆಯರು, ಹೊಸಕೋಟೆಯಲ್ಲಿ 1000ಕ್ಕೆ 898, ಬೆಂಗಳೂರು ನಗರ ಪ್ರದೇಶದಲ್ಲಿ 1000ಕ್ಕೆ 940 ಮಹಿಳೆಯರು ಇದ್ದಾರೆ. ಲಿಂಗಪತ್ತೆ ಮಾಡುವುದು ಕಾನೂನು ಬಾಹಿರವಾಗಿದ್ದರೂ, ಬೆಂಗಳೂರಿನಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ಹೆಣ್ಣು ಶಿಶುವೆಂದು ಪತ್ತೆ ಮಾಡಿ ಗರ್ಭಪಾತ ಮಾಡಲಾಗುತ್ತಿದೆ. ಇಂತಹ ಆಸ್ಪತ್ರೆಗಳು ಗುಪ್ತವಾಗಿ ಈ ಕೆಲಸಮಾಡುವುದರಿಂದ ಸಾರ್ವಜನಿಕರಿಗೆ ಈ ಮಾಹಿತಿಗಳು ದೊರೆಯುವುದಿಲ್ಲ. ಕಾನೂನು ಬಾಹಿರವಾದುದರಿಂದ ಜನರಿಂದ ಹಣವನ್ನು ಕೇಳಲಾಗುತ್ತಿದೆ.

ಕರ್ನಾಟಕವು ಸೇರಿದಂತೆ ಹಲವಾರು ರಾಜ್ಯಗಳಲ್ಲಿ ಹೆಣ್ಣು ಭ್ರೂಣಹತ್ಯೆಯನ್ನು ನಿಷೇಧಿಸಲಾಗಿದೆ. ಸರ್ವೋಚ್ಚ ನ್ಯಾಯಾಲಯ ಹಲವಾರು ಬಾರಿ ಕಠಿಣ ನಿರ್ದೇಶನವನ್ನು ನೀಡಿದೆ. ಹಾಗಿದ್ದಾಗ್ಯೂ ಹೆಣ್ಣು ಭ್ರೂಣ ಹತ್ಯೆಯು ನಿರಂತರವಾಗಿ ನಡೆದುಕೊಂಡು ಬಂದಿದೆ.

ಮಹಿಳಾ ಸಂಘಟನೆಗಳ ಒತ್ತಡದಿಂದಾಗಿ ಮಹಿಳಾಪರ ಕಾನೂನುಗಳು ಜಾರಿಗೆ ಬಂದಿದ್ದರೂ, ಜನರ ಮನೋಭಾವನೆಗಳಲ್ಲಿ ಧೋರಣೆಗಳಲ್ಲಿ ಮೂಲಭೂತ ಬದಲಾವಣೆಯಾಗದಿದ್ದರೆ ಕಾನೂನುಗಳು ಕಾಗದದ ಮೇಲೆ ಉಳಿಯುತ್ತವೆ. ಆರೋಗ್ಯಕರ ಬದಲಾವಣೆಗಳು ಸಮಾಜದ ಧೋರಣೆಯನ್ನು ಅವಲಂಬಿಸಿದೆ. ಸಂಘಟಿತ ಹೋರಾಟ ಮಾತ್ರ ಮಹಿಳೆಯರ ಸ್ಥಾನಮಾನದಲ್ಲಿನ ಬದಲಾವಣೆಗೆ ದಾರಿಯಾಗಬಲ್ಲವು.

ಹಲವಾರು ಕಾರಣಗಳಿಂದ ಮಾನಸ ಪತ್ರಿಕೆಯ ಪ್ರಕಟಣೆ ತಡವಾಗಿದೆ. ಓದುಗರು ಸಹಕರಿಸಬೇಕು. ಜೊತೆಗೆ ಮಾನಸದ ನಿರಂತರತೆ ಕಾಯಲು ನಿಮ್ಮ ಸಹಕಾರ ಅಗತ್ಯ. ದಯವಿಟ್ಟು ಮಾನಸಕ್ಕೆ ಲೇಖನ, ವಿಮರ್ಶೆ ಕಳಿಸಿಕೊಡಿ. ಚಂದಾದಾರರಾಗಿ ಉಳಿದ ಸಂಚಿಕೆಗಳನ್ನು ಜರೂರಾಗಿ ತರಲು ತಮ್ಮ ಸಹಕಾರ - ಸಲಹೆ ಅಗತ್ಯ.

ಆದಿವಾಸಿ ಹೋರಾಟ ಸೌಹಾರ್ದ ಸಭೆ - ಒಂದು ವರದಿ

ದಿನಾಂಕ 20-7-03 ರಂದು ಆದಿವಾಸಿ ಹೋರಾಟ, ಸೌಹಾರ್ದ ಸಭೆಯನ್ನು ಕರ್ನಾಟಕ ವಿಮೋಚನಾ ರಂಗ, ಮಾನಸ,ಕುದುರೆ ಮುಖ ರಾಷ್ಟ್ರೀಯ ವಿರೋಧಿ ಒಕ್ಕೂಟ, ಪಿ.ಡಿ. ಎಫ್ ಹಾಗೂ ಪಿ.ಯು.ಸಿ.ಎಲ್. ಕರ್ನಾಟಕ ಇವುಗಳ ಒಕ್ಕೂಟದ ಆಶ್ರಯದಲ್ಲಿ ನಡೆಸಲಾಯಿತು. ಈ ಸಭೆಯಲ್ಲಿ ಕುದುರೆ ಮುಖ ರಾಷ್ಟ್ರೀಯ ಉದ್ಯಾನ ವಿರೋಧಿ ಒಕ್ಕೂಟದ ವಿಠಲ್ ಹೆಗ್ಡೆ, ಕೇರಳದ ಎ.ಜಿ.ಎಂ.ಎಸ್.ನ ಸಿ.ಕೆ.ಜಾನು, ಪಿ.ಎಸ್.ಎಸ್.ಪಿ ಒರಿಸ್ಸಾದ ದೇಬರಂಜನ್ ಸಾರಂಗಿ ಹಾಗೂ ನಾಗರ ಹೊಳೆಯ ಬುಡಕಟ್ಟು ಕೃಷಿಕರ ಸಂಘದ ಪ್ರತಿನಿಧಿಗಳು ಮಾತನಾಡಿ ಆದಿವಾಸಿಗಳಿಗಿರುವ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದರು. ಈ ಸಭೆಯ ಅಧ್ಯಕ್ಷತೆ ವಹಿಸಿದ್ದ ಬಾಬು ಮೆಹ್ತಾರವರು ಮಾತನಾಡಿ ದವರ ಭಾಷಣವನ್ನು ಕನ್ನಡದಿಂದ ಇಂಗ್ಲೀಷ್‌ಗೆ ಹಾಗೂ ಇಂಗ್ಲೀಷನಿಂದ ಕನ್ನಡಕ್ಕೆ , ಜೊತೆಗೆ ಮಲೆಯಾಳದಿಂದ ಇಂಗ್ಲೀಷ್ ಹಾಗೂ ಕನ್ನಡಕ್ಕೆ ಭಾಷಾಂತರಿಸುವ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದುದು ಸ್ತುತ್ಯಾರ್ಥವಾಗಿತ್ತು.

ಮೊದಲು ಮಾತನಾಡಿದ ವಿಠಲ್ ಹೆಗ್ಡೆಯವರು ಪಶ್ಚಿಮಘಟ್ಟದ ಹೃದಯ ಭಾಗದಲ್ಲಿರುವ ಪ್ರದೇಶವನ್ನು ರಾಷ್ಟ್ರೀಯ ಉದ್ಯಾನವನ್ನಾಗಿಸುವ ಸರ್ಕಾರದ ಕ್ರಮವನ್ನು ಪ್ರಶ್ನಿಸುತ್ತಾ, ಅವರು ನಡೆಸುತ್ತಿರುವ ಹೋರಾಟವನ್ನು ಸಹ ವಿವರಿಸಿದರು. ಸ್ಥಳೀಯ ದೊರೆಯೊಬ್ಬನಿಗೆ ಬೀಜವಿತ್ತ ಬ್ರಿಟೀಷರು, ಅದನ್ನು ಕುದುರೆ ಮುಖದಲ್ಲಿ ಅವರು ಆದಿವಾಸಿಗಳಿಗೆ ನೀಡಿ, ವಾಸಿಸುತ್ತಿರುವ ಅರಣ್ಯದ ಆದಿವಾಸಿಗಳಿಗೆ ಆ ಬೀಜಗಳನ್ನು ನೀಡಿ, ಟೀಕ್ ಮರ ಬೆಳೆಯುವಂತೆ ಆಜ್ಞೆ ಇತ್ತರು. ಆದಿವಾಸಿಗಳೆಲ್ಲ ಸೇರಿ ಸಮಾಲೋಚನೆ ನಡೆಸಿದರು. ಟೀಕ್ ಮರ ಬೆಳೆದರೆ ಇಡೀ ಅರಣ್ಯವನ್ನು ಸರ್ಕಾರ ವಹಿಸಿಕೊಳ್ಳುತ್ತದೆ. ಆದರೆ ಬೀಜ ಬಿತ್ತುವುದಿಲ್ಲವೆಂದರೆ ದೊರೆಗೆ ಹಾಗೂ ಬ್ರಿಟೀಷರಿಗೆ ಕೋಪ ಬರುತ್ತದೆ. ಹಾಗಾಗಿ ಆದಿವಾಸಿಗಳೆಲ್ಲ ಒಂದು ತೀರ್ಮಾನಕ್ಕೆ ಬಂದರು. ಬೀಜಗಳನ್ನೆಲ್ಲ ಹುರಿದು ನಂತರ ಅವುಗಳನ್ನೆಲ್ಲ ಬಿತ್ತಿದರು. ಹೀಗೆ ಆದಿವಾಸಿಗಳು ತಮ್ಮದೇ ಆದ ಪ್ರಜ್ಞೆಯಿಂದ ಕಾಡನ್ನು ರಕ್ಷಿಸಲು, ಕಾಡನ್ನು ಸರ್ಕಾರದ ಕೈಗೆ ಒಪ್ಪಿಸದೇ ಇರಲು ಪ್ರಯತ್ನಿಸಿದುದು ಅರ್ಥವಾಗುತ್ತದೆ. ಜಾಗತೀಕರಣದ ಸಂದರ್ಭದಲ್ಲಿ ಸರ್ಕಾರ ಕುದುರೆ ಮುಖದ ಅರಣ್ಯ ಪ್ರದೇಶವನ್ನು ರಾಷ್ಟ್ರೀಯ ಉದ್ಯಾನವನ ಮಾಡುವ ಮೂಲಕ ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸುವ ಆದಿವಾಸಿಗಳನ್ನು ನಿರ್ವಸತಿಗೊಳಿಸುವ ಸರ್ಕಾರದ ನೀತಿಯನ್ನು ವಿಠಲ ಹೆಗಡೆಯವರು ಖಟುವಾಗಿ ಟೀಕಿಸಿದರು, ವಿದೇಶೀ ಬಂಡವಾಳ ಆಕರ್ಷಿಸುವ ಸರ್ಕಾರ ಆದಿವಾಸಿಗಳಿಗೇನು ಮಾಡಿದೆ ? ಎಂಬ ಪ್ರಶ್ನೆಯಿಂದ ಹೋರಾಟ ರೂಪ ತಳೆದಿದ್ದು, ತಮ್ಮ ಹೋರಾಟಕ್ಕೆ ದಿಕ್ಕು ತೋರಿಸುವಂತಹ, ಹೋರಾಟ ಮುಂದುವರಿಯುವಂತಹ ರೀತಿಗಳನ್ನು ಸೂಚಿಸುವ ಹಾಗೂ ಹೋರಾಟ ಬಲ ಪಡಿಸುವ ಕೆಲಸವನ್ನು ಬೆಂಗಳೂರಿನ ಸಂಘಟನೆಗಳು ಮಾಡಬೇಕಾಗಿದೆ ಎಂದರು. ತಮ್ಮ ಹೋರಾಟಕ್ಕೆ ಪತ್ರಿಕೆಗಳು, ಮಾಧ್ಯಮಗಳು ಅಷ್ಟೊಂದು ಪ್ರಚಾರ ನೀಡುತ್ತಿಲ್ಲವಾದ್ದರಿಂದ ಬೆಂಗಳೂರಿನ ಸಂಘಟನೆಗಳು ಈ ಕೆಲಸವನ್ನು ಮಾಡಿ ತಮ್ಮ ಹೋರಾಟಕ್ಕೆ ಬಲ ನೀಡಬೇಕೆಂದೂ ಸಹ ಇವರು ಮನವಿ ಮಾಡಿದರು. ಜೊತೆಗೆ ಹೋರಾಟದ ಪರವಾಗಿ ಸರ್ಕಾರದ ಮೇಲೆ ಒತ್ತಡ ಹೇರುವಂತಹ ಕೆಲಸವನ್ನು ಮಾಡಬೇಕೆಂದು ಇವರು ಮನವಿ ಇತ್ತರು.

ನಂತರ ಮಾತನಾಡಿದ ಕಾಶೀಪುರದ ಪ್ರಾಕೃತಿಕ ಸಂಪಾದ್ ಸುರಕ್ಷಾ ಪರಿಷತ್ತಿನ ದೇಬರಂಜನ್ ಸಾರಂಗಿ ಒರಿಸ್ಸಾದಲ್ಲಿ ಅಲ್ಯೂಮಿನಿಯಂ ಗಣಿಗಾರಿಕೆ ವಿರುದ್ಧ ನಡೆಯುತ್ತಿರುವ ಹೋರಾಟವನ್ನು ವಿವರಿಸಿದರು. ಈ ಹೋರಾಟ ಸ್ವಾಯತ್ತ ರೂಪದಾಗಿದ್ದು, ಯಾವುದೇ ರಾಜಕೀಯ ಪಕ್ಷಗಳ ಜೊತೆ ಶಾಮೀಲುಗೊಂಡಿರುವುದಿಲ್ಲ. ಅಲ್ಲಿನ ಆದಿವಾಸಿಗಳು ಹಲವಾರು ವರ್ಷಗಳಿಂದ ಗಣಿಗಾರಿಕೆ ವಿರುದ್ಧ ಹೋರಾಟ ನಡೆಸುತ್ತಿದ್ದು, ಇಲ್ಲಿಯವರೆಗೆ ಅಲ್ಯೂಮಿನಿಯಂ ಗಣಿಗಾರಿಕೆ ಸ್ಥಾಪಿಸಲು ಅವಕಾಶ ಕೊಡದಿರುವುದು ಅತ್ಯಂತ ಹರ್ಷದ ಸಂಗತಿ. ಅಲ್ಲಿಯ ಆದಿವಾಸಿಗಳಿಗೆ ಅರಣ್ಯ, ಭೂಮಿ, ನೆಲ, ಜಲ ಅವರ ಬದುಕಿನ ಜೊತೆಗೆ ಸೇರಿಕೊಂಡಿರ ತಕ್ಕಂತವುಗಳು. ಪ್ರಾಣವನ್ನಾದರೂ ಕೊಟ್ಟೇವು ಆದರೆ ಭೂಮಿ ಬಿಡುವುದಿಲ್ಲ ಎಂಬ ಹಟದಿಂದ ಅಲ್ಲಿನ ಆದಿವಾಸಿಗಳು ಹೋರಾಟ ನಡೆಸುತ್ತಿದ್ದಾರೆ. ಈ ಹೋರಾಟದ ಹಂತದಲ್ಲಿ ಮೈಕಂಚದಲ್ಲಿ ಪೋಲೀಸ್ ನಡೆಸಿದ ಗೋಲಿಬಾರ್ ಪರಿಣಾಮವಾಗಿ ಮೂರು ಜನ ಆದಿವಾಸಿಗಳು ಪ್ರಾಣತೆತ್ತಿದ್ದಾರೆ. ಹೀಗೆ ಪೊಲೀಸ್, ಸರ್ಕಾರದ ಚಕ-ಮಕಿಗಳೊಂದಿಗೆ ಸಹ ಹೋರಾಟ ಮುಂದುವರಿಯುತ್ತಲೇ ಇದೆ. ಸರ್ಕಾರ, ಸರ್ಕಾರದ ಅಧಿಕಾರಿಗಳು ಇಂದು ಅಭಿವೃದ್ಧಿಯ ಬಗ್ಗೆ ಮಾತನಾಡುತ್ತಲೇ ಇವೆ. ಆದರೆ ಆದಿವಾಸಿಗಳು ಶಿಕ್ಷಣ, ಆಸ್ಪತ್ರೆಯ ಸೌಲಭ್ಯ ಕೋರಿದರೆ, ಕಾಶೀಪುರದಲ್ಲಿ ಇಂದು ಮೂರು ಪೋಲೀಸ್ ಸ್ಟೇಷನ್‌ಗಳು ತಲೆ ಎತ್ತಿವೆ. ಇದು ಯಾರ ಅಭಿವೃದ್ಧಿ ? ಯಾರಿಗಾಗಿ ಅಭಿವೃದ್ಧಿ ? ಅಭಿವೃದ್ಧಿ ಅಂದರೆ ಏನು ? ಎನ್ನುವ ಪ್ರಶ್ನೆಯನ್ನು ದೇಬುರವರು ಎತ್ತಿದರು.

ಹೋರಾಟದ ಬಗ್ಗೆ ವಿವರಿಸಿ ಮಾತನಾಡಿದ ದೇಬು ವರ್ಷಕ್ಕೊಮ್ಮೆಯಾದರೂ ಸ್ವಾಯತ್ತ ಸಂಘಟನೆಗಳು ಕಾಶೀಪುರ ಹಾಗೂ ಇತರ ಕಡೆಗೆ ಭೇಟಿ ನೀಡಬೇಕು ಎಂದರು. ಹಾಗೂ ಮಾನಸ, ಪಿ.ಯು.ಸಿ.ಎಲ್, ಕರ್ನಾಟಕ ವಿಮೋಚನ ರಂಗ, ಪಿ.ಡಿ.ಎಫ್ ಈ ಸಂಘಟನೆಗಳು 'ಕಾಶೀಪುರ'ದ ಹೋರಾಟದ ವರದಿಯನ್ನು ಇಂಗ್ಲೀಷ್‌ನಲ್ಲಿ ತಂದು, ಇಡಿಯ ಹೋರಾಟವನ್ನು ಎಲ್ಲರಿಗೂ ತಿಳಿಯುವಂತೆ ಮಾಡಿದುದಕ್ಕೆ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು. ಜೊತೆಗೆ ಸ್ವಾಯತ್ತ ಸಂಘಟನೆಗಳು ಆಗಾಗ್ಗೆ ಈ ರೀತಿಯ ಸಭೆಯ ಮೂಲಕ ವಿಚಾರ ವಿನಿಮಯ ನಡೆಸಲೇ ಬೇಕು ಎಂದರು.

ನಾಗರಹೊಳೆಯ ಬುಡಕಟ್ಟಿನ ಕೃಷಿಕರ ಸಂಘದ ಇಬ್ಬರು ಪ್ರತಿನಿಧಿಗಳು ಮಾತನಾಡಿ ಅಲ್ಲಿಯ ಆದಿವಾಸಿಗಳಿಗೆ ಆಗುತ್ತಿರುವ ಅನ್ಯಾಯವನ್ನು ವಿವರಿಸಿದರು. ಅಲ್ಲಿಯ ಕಾಡನ್ನು ಸರ್ಕಾರ ವಶಪಡಿಸಿಕೊಂಡ ಹಿನ್ನಲೆಯಲ್ಲಿ ಆದಿವಾಸಿಗಳು ಸ್ಥಳಾಂತರಗೊಂಡಿದ್ದು, ಅವರ ನಿತ್ಯ ಜೀವನಕ್ಕೆ ಯಾವುದೇ ರೀತಿಯ ಪುನರ್ವಸತಿಗಳನ್ನು ಕಲ್ಪಿಸಲಾಗಿಲ್ಲ. ಹಾಗಾಗಿ ಇಂದಿಗೂ ಜೀವನಾಧಾರಕ್ಕೆ ಏನೂ ಇರದ ಬುಡಕಟ್ಟಿನ ಜನರಲ್ಲಿ ಇಬ್ಬರು ಜೇನು ಸಂಗ್ರಹಿಸಲು ಹೋದಾಗ ಪೋಲೀಸರು ಗುಂಡು ಹಾರಿಸಿದ್ದರಿಂದ, ಅದರಲ್ಲಿ ಒಬ್ಬ ಸತ್ತು ಹೋದನು. ಈ ವಿಚಾರವನ್ನು ಪೋಲೀಸರು ಮುಚ್ಚಿ ಹಾಕಿದರು. ತಪ್ಪಿಸಿಕೊಂಡು ಬಂದ ತಿಮ್ಮ-ಮತ್ತೊಬ್ಬ-ಅಂದರೆ ರವಿ ಪೋಲೀಸರ ಗುಂಡೇಟಿಗೆ ಬಲಿಯಾದ ಸುದ್ದಿಯನ್ನು ತಿಳಿಸಿದನು. ಈ ಬಗ್ಗೆ ಜನ ಪ್ರತಿರೋಧ ವ್ಯಕ್ತ ಪಡಿಸುತ್ತಿದ್ದಾರೆಂದು ಪ್ರತಿನಿಧಿಗಳು ಹೇಳಿದರು. ಬುಡಕಟ್ಟಿನವರಿಗೆ ಜೀವನದ ಸಮಸ್ಯೆಯೇ ಮುಖ್ಯವಾಗಿದೆ ಎಂದು ಅವರು ಹೇಳಿದರು. ತಮ್ಮ ಹೋರಾಟಕ್ಕೆ ಇತರ ಸಂಘಟನೆಗಳ ಬೆಂಬಲ ಬೇಕು ಎಂದೂ ಸಹ ಅವರು ನುಡಿದರು.

ಕಾಶೀಪುರದ ವರದಿಯನ್ನು ಸಿ.ಕೆ.ಜಾನುರವರು ಸಾಂಕೇತಿಕವಾಗಿ ಬಿಡುಗಡೆ ಮಾಡಿದರು. ಕೇರಳದ ವೈನಾಡಿನ ಆದಿವಾಸಿಗಳು ಭೂಮಿಗಾಗಿ ನಡೆಸಿದ್ದ ಹೋರಾಟದ ಸಮಯದಲ್ಲಿ ಜಮೀನು ವಿತರಣೆಗಾಗಿ ನಿಯಮಿಸಿದ್ದ ಕೇರಳದ ಸಮಿತಿಯನ್ನು ವಜಾ ಮಾಡಲಾಯಿತು. 1970 ರಿಂದಲೂ ಅಲ್ಲಿ ಆದಿವಾಸಿಗಳ ಎತ್ತಂಗಡಿ ನಡೆಯುತ್ತಲೇ ಇದೆ. ಈ ನಡುವೆ ಭೂಮಿಗಾಗಿ ನಡೆದ ಹೋರಾಟದಲ್ಲಿ ಕೇರಳದ ವೈನಾಡಿನ ಮಾತುಂಗಾದಲ್ಲಿ ಆದಿವಾಸಿಗಳು ಅರಣ್ಯದ ಮೇಲಿನ ತಮ್ಮ ಹಕ್ಕನ್ನು ಪ್ರತಿಪಾದಿಸಿ, ವಿರೋಧಿಸಿದ್ದಕ್ಕಾಗಿ ಹಲವಾರು ಆದಿವಾಸಿಗಳನ್ನು ಕೊಂದು ಹಾಕಿದ್ದಾರೆ. ಸಾವಿರಾರು ಆದಿವಾಸಿಗಳನ್ನು ಜೈಲು ಪಾಲು ಮಾಡಿದ್ದಾರೆ. ಹೀಗೆ ಭೂಮಿಯ ಹಕ್ಕಿಗಾಗಿ ಹೋರಾಟ ನಡೆಸಿದಲ್ಲಿ ಗೋಲಿಬಾರು ನಡೆಯುತ್ತಿದೆ. ಇತ್ತೀಚೆಗಂತೂ ಜನ ಭೂಮಿಯ ಮೇಲೆ ಬದುಕುವ ತಮ್ಮ ಹಕ್ಕುಗಳನ್ನೇ ಕಳೆದು ಕೊಳ್ಳುತ್ತಿದ್ದಾರೆ. ಹೀಗೆ ಹೇಳಿದ ಸಿ.ಕೆ.ಜಾನು, ಭೂಮಿ ಇಲ್ಲದ ಜನರಿಗೆ ಭೂಮಿಯ ಹಕ್ಕು ತಮ್ಮ ಹೋರಾಟದ ಉದ್ದೇಶ ಎಂದು ಹೇಳಿದರು.

ಬೆಂಗಳೂರಿನ ಸಂಘಟನೆಗಳಿಂದ ತಾವೇನು ನಿರೀಕ್ಷಿಸುತ್ತೇವೆ ಎಂದು ಮಾತನಾಡಿದ ಸಿ.ಕೆ.ಜಾನು ಇಷ್ಟು ವರ್ಷಗಳಿಂದ ತಾವು ಇತರರಿಂದ ನಿರೀಕ್ಷಿಸಿದುದು ಸುಳ್ಳಾಗಿದೆ, ಹುಸಿಯಾಗಿದೆ. ತಾವು ಹೋರಾಟ ನಡೆಸುವುದಂತೂ ನಿಜ. ಬೇರೆ ಸಂಘಟನೆಗಳು ತಮ್ಮ ಮಿತಿಯೊಳಗೆ ಏನು ಮಾಡಲು ಸಾಧ್ಯ ಎಂಬುದನ್ನು ಹೇಳಬೇಕು. ಏನೂ ಮಾಡುವುದು ಸಾಧ್ಯವಾಗುವುದಿಲ್ಲವೆಂದರೆ ಹಾಗೆಯೇ ಹೇಳಿದರೆ ಸ್ನೇಹ ಉಳಿಯುತ್ತದೆ. ಮಾಡುತ್ತೇವೆಂದು ಹೇಳಿ ಮಾಡದಿದ್ದರೆ ಸ್ನೇಹವೂ ಉಳಿಯುವುದಿಲ್ಲ ಎಂದು ಕಟುವಾಗಿ ನುಡಿದರು.

ಮಧ್ಯಾಹ್ನ ಕಾಶೀಪುರದ ಹೋರಾಟ ಕುರಿತ ಸಾಕ್ಷ್ಯ ಚಿತ್ರವೊಂದನ್ನು ತೋರಿಸಲಾಯಿತು.

ಬೆಂಗಳೂರಿನ ಸಂಘಟನೆಗಳು ಹೇಗೆ ಆದಿವಾಸಿ ಹೋರಾಟದೊಂದಿಗೆ ತಮ್ಮ ಬೆಂಬಲ ಸೂಚಿಸಬಹುದೆಂಬುದನ್ನು ಕುರಿತು ಮಧ್ಯಾಹ್ನ ಚರ್ಚಿಸಲಾಯಿತು. ಕೇರಳದಲ್ಲಿ N.G.O ಗಳು ಹೀಗೆ ಜನಪರ ಚಳುವಳಿಯನ್ನು ಮುರಿದಿದ್ದಾರೆಂದು ಪ್ರತಿನಿಧಿಗಳೊಬ್ಬರು ವಿವರಿಸಿದರು. N.G.O ಗಳು ಜನರನ್ನು ಕೊಂಡುಕೊಳ್ಳಲು ಪ್ರಯತ್ನಿಸುತ್ತವೆ ಹಾಗೂ ಜನಪರ ಆಂದೋಲನ ಮುರಿಯುವಲ್ಲಿ ಇವು ಪ್ರಬಲ ಪಾತ್ರವಹಿಸುತ್ತಿವೆ ಎಂಬ ಅಭಿಪ್ರಾಯಗಳು ಸಭೆಯಲ್ಲಿ ಮೂಡಿಬಂದವು.

'ಕಾಶೀಪುರದ' ವರದಿಯನ್ನು ತಂದ ಗುಂಪುಗಳೇ ಈ ಸಭೆಯನ್ನು ನಡೆಸಿ 'ಆದಿವಾಸಿ ಹೋರಾಟ' ಕುರಿತ ಒಂದು ಚರ್ಚೆ ನಡೆಸಿ, ಆದಿವಾಸಿ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಲು ಪ್ರಯತ್ನಿಸಿರುವುದರಿಂದ ಈ ಸಂಘಟನೆಗಳೇ ನೇತೃತ್ವ ವಹಿಸಿ ಒಂದು 'ಸಾಲಿಡ್ಯಾರಿಟಿ ಗ್ರೂಪ್' ಸಂಘಟಿಸ ಬೇಕು ಎನ್ನುವ ಸೂಚನೆಯನ್ನು ಸಮ್ಮತಿಸಲಾಯಿತು. ಹಣಕಾಸಿನ ನೆರವಿಲ್ಲದೇ ದುಡಿಯುವ ಈ ಸಂಘಟನೆಗಳ ನೇತೃತ್ವದಲ್ಲಿ ಆದಿವಾಸಿ ಹೋರಾಟಕ್ಕೆ ಲಾಭ ಮಾಡುವುದು, ಪ್ರಚಾರ ಮಾಧ್ಯಮಗಳಲ್ಲಿ ಈ ಬಗ್ಗೆ ವರದಿ ಮಾಡುವಂತೆ ಮಾಡುವುದು, ಚಿಕ್ಕ-ಪುಟ್ಟ ರೀತಿಯಲ್ಲಿ ಹಣ ಸಂಗ್ರಹಣೆ, ಸರ್ಕಾರಕ್ಕೆ ಒತ್ತಡ ಹೇರುವಂತಹ ಕೆಲಸಗಳನ್ನು ಮಾಡಬೇಕೆಂದೂ ಕೂಡಾ ತೀರ್ಮಾನಿಸಲಾಯಿತು. ಜೊತೆಗೆ ಬೇರೆ ಬೇರೆ ಕಡೆ ನಡೆಯುವ ಆದಿವಾಸಿ ಹೋರಾಟಗಳಿಗೆ ಬೆಂಬಲ ನೀಡಬೇಕೆಂದು ತೀರ್ಮಾನಿಸಲಾಯಿತು.

- ಚಂಪಾವತಿ ಎಚ್. ಎಸ್.

ಆದಿವಾಸಿಗಳ ಸಮಸ್ಯೆಗಳು - ಆದಿವಾಸಿ ಹೋರಾಟಗಳು : ಒಂದು ಸೌಹಾರ್ದತಾ ಸಭೆ

ಕರ್ನಾಟಕ ವಿಮೋಚನ ರಂಗ, ಮಾನಸ, ಪಿ.ಡಿ.ಎಫ್, ಪಿ.ಯು.ಸಿ.ಎಲ್ ಕರ್ನಾಟಕ, ಕುದುರೆ ಮುಖ ರಾಷ್ಟ್ರೀಯ ಉದ್ಯಾನ ವಿರೋಧಿ ಒಕ್ಕೂಟ ಈ ಎಲ್ಲಾ ಸಂಘಟನೆಗಳು ಜುಲೈ 20, 2003 ರಂದು ಆದಿವಾಸಿಗಳ ಸಮಸ್ಯೆಗಳು-ಆದಿವಾಸಿ ಹೋರಾಟಗಳು : ಒಂದು ಸೌಹಾರ್ದತಾ ಸಭೆಯನ್ನು ಏರ್ಪಡಿಸಿದ್ದವು. ಆ ಸಂದರ್ಭದಲ್ಲಿ ತಂದ ಕರಪತ್ರವನ್ನು ಇಲ್ಲಿ ಪ್ರಕಟಿಸಲಾಗಿದೆ.

ಸಂ.ಮಂ

ಆತ್ಮೀಯ ನಾಗರೀಕ ಬಾಂಧವರೇ,

'ನಗರೀಕರಣ ಹೆಚ್ಚಿದಂತೆ ಕಾಡು ಕಡಿಮೆಯಾಗುತ್ತಿದೆ' ಎಂಬುದು ಈಗಾಗಲೇ ಹಳತಾಗಿರುವ ಮಾತು. ಮಾತ್ರವಲ್ಲ ಅರ್ಧಸತ್ಯದ ಮಾತು. ಕೈಗಾರಿಕೋದ್ಯಮಿಗಳ, ಟಿಂಬರ್ ವ್ಯಾಪಾರಿಗಳ, ಬ್ರಿಟೀಷ್ ವಸಾಹತುಶಾಹಿಗಳಿಂದ ಮೊದಲುಗೊಂಡು ಈಗಲೂ ಮುಂದುವರೆದಿರುವ ಅರಣ್ಯ ಉಪಜೀವಿ ವಿದೇಶಿ ಉದ್ಯಮಗಳ ಆಸಕ್ತಿಗಾಗಿ ನಡೆಯುತ್ತಲೇ ಇರುವ ಕಾಡುಕಡಿತಕ್ಕೆ ನಗರದ ಸಾಮಾನ್ಯರನ್ನು ಹೊಣೆಗಾರರನ್ನಾಗಿ ಮಾಡುವ ಹುನ್ನಾರವಿದು. ಅಷ್ಟು ಮಾತ್ರವಲ್ಲ ಅರಣ್ಯನಾಶ ಎಂದರೆ ಸಾವಿರಾರು ವರ್ಷಗಳಿಂದ ಅರಣ್ಯಗಳನ್ನು ತಮ್ಮ ಬದುಕಿನಷ್ಟೇ ಜತನದಿಂದ ಕಾಪಾಡುತ್ತಾ ಬಂದು ಆದಿವಾಸಿಗಳ ಬದುಕು-ಭವಿಷ್ಯದ ನಾಶವೂ ಸಹ ಎಂಬುದನ್ನು ಮರೆಮಾಚುವ ಮಾತು.

ವಾಸ್ತವವಾಗಿ ಲಾಭಕೋರ ಕೈಗಾರೀಕರಣ-ವಿಕೃತ ನಗರೀಕರಣ-ಪ್ರಬಲ ಉದ್ಯಮ ಹಿತಾಸಕ್ತಿಗಳು ಹಾಗೂ ಅದು ಹುಟ್ಟುಹಾಕಿರುವ ಜೀವನ ಪದ್ಧತಿಗಳು ಕಳೆದ 250 ವರ್ಷಗಳಿಂದಲೂ ಆದಿವಾಸಿಗಳ ಬದುಕು - ಭವಿಷ್ಯದ ಮೇಲೆ ಸತತ ಆಕ್ರಮಣ ನಡೆಸುತ್ತಲೇ ಇದೆ. ಹೀಗಾಗಿಯೇ ಬ್ರಿಟೀಷರ ವಿರುದ್ಧ ಬಂಡೆದ್ದ ಮೊದಲ ಭಾರತೀಯ ಜನಸಮುದಾಯ ಆದಿವಾಸಿಗಳೇ ಆಗಿದ್ದರು. ಬಿರ್ಸಾಮುಂಡಾ, ಅಲ್ಲೂರಿ ಸೀತಾರಾಮರಾಜು, ಹಲಗಲಿಯ ಬೇಡರು....

1947 ರಲ್ಲಿ ಬ್ರಿಟೀಷರು ಭಾರತ ಬಿಟ್ಟು ಹೋದರೂ, ಕಾಡಿನ ಬಗ್ಗೆ ಹಾಗೂ ಆದಿವಾಸಿಗಳ ಬಗ್ಗೆ ಇದ್ದ ವಸಾಹತುಶಾಹಿ ದೃಷ್ಟಿಕೋನ ಹಾಗೂ ವಸಾಹತು ಆಸಕ್ತಿಗಳು ಮಾತ್ರ ಬಿಟ್ಟು ಹೋಗಲಿಲ್ಲ. ಹೀಗಾಗಿಯೇ ಆದಿವಾಸಿ ಸಮುದಾಯಗಳು 'ಸ್ವತಂತ್ರ ಭಾರತದ' ಆಂತರಿಕ ವಸಾಹತುಗಳಾಗಿಯೇ ಮುಂದುವರೆದವು. ಒಂದು ಅಂದಾಜಿನ ಪ್ರಕಾರ ಬೃಹತ್ ಯೋಜನೆಗಳಿಂದ ನಿರ್ವಸಿತರಾದವರಲ್ಲಿ ಶೇ.40 ಮಂದಿ ಆದಿವಾಸಿಗಳಾಗಿದ್ದಾರೆ. ಅಭಿವೃದ್ಧಿಯ ಹೆಸರಿನಲ್ಲಿ ಆದಿವಾಸಿ ಪ್ರದೇಶದಲ್ಲಿ ಹೇರಳವಾಗಿರುವ ಫಲವತ್ತಾದ ಭೂಮಿ, ಅರಣ್ಯ, ನದಿಗಳು, ಮಿನರಲ್ಸ್, ತೈಲ ಮತ್ತಿತರ ನೈಸರ್ಗಿಕ ಸಂಪನ್ಮೂಲಗಳನ್ನು ಬೃಹತ್ ಸಂಸ್ಥೆಗಳು ನಿರ್ದಾಕ್ಷಿಣ್ಯವಾಗಿ ಲೂಟಿ ಮಾಡುತ್ತಿವೆ.

ಆದಿವಾಸಿ ಕಾರ್ಯಕರ್ತರೊಬ್ಬರು ಹೇಳುವಂತೆ 1947 ರ ನಂತರದಲ್ಲಿ ಒಂದು ಮಾತು ಸತ್ಯ ಎನ್ನುವಂತಾಗಿದೆ. ಕಾಡನ್ನು ಲೂಟಿ ಮಾಡುತ್ತಿರುವವರನ್ನು 'ಸರ್ಕಾರ' ಎಂದೂ, ಕಾಡನ್ನು ಉಳಿಸಿಕೊಳ್ಳುತ್ತಿರುವವರನ್ನು 'ಕಳ್ಳರು' ಎಂದೂ ಗುರುತಿಸ-ಲಾಗುತ್ತದೆ. ಅರಣ್ಯ ಇಲಾಖೆಯೊಂದೇ ಕಳೆದ 50 ವರ್ಷಗಳಲ್ಲಿ ಲಾಭಕೋರ ಉದ್ದಿಮೆಗಳಿಗಾಗಿ, ಶೇ.33 ರಷ್ಟಿದ್ದ ಕಾಡನ್ನು ಶೇ.19.4 ಕ್ಕಿಳಿಸಿದೆ. ಮೂರುವರೆ ಕೋಟಿಗೂ ಹೆಚ್ಚು ಆದಿವಾಸಿಗಳನ್ನು ಹೊರಗೆಸೆಯಲಾಗಿದೆ. ಇವರಲ್ಲಿ ಶೇ.70 ರಷ್ಟು ಆದಿವಾಸಿಗಳು ಈಗಲೂ ತಲೆಯ ಮೇಲೆ ಸೂರಿಲ್ಲದೆ, ನಿಲ್ಲಲೂ ನೆಲೆಯಿಲ್ಲದೆ ತಮ್ಮ ದೇಶದಲ್ಲೇ ಶಾಶ್ವತ ನಿರಾಶ್ರಿತರಂತೆ ಬಾಳುತ್ತಿದ್ದಾರೆ.

ಅದರಲ್ಲೂ ಜಾಗತೀಕರಣವೆಂಬ ನವವಸಾಹತುಶಾಹಿಯ ರಥಚಕ್ರವು ಭಾರತದ ಆದಿವಾಸಿಗಳ ಮೇಲೆ ವಿಶೇಷ ಆಕ್ರಮಣವನ್ನೇ ನಡೆಸುತ್ತಿದೆ. ಅರಣ್ಯ ಗರ್ಭದಲ್ಲಿ ಅಡಗಿರುವ ಅಮೂಲ್ಯ ಖನಿಜ ಸಂಪತ್ತಿನ ಲೂಟಿಗಾಗಿ ವಿದೇಶಿ ಗಣಿ ಉದ್ಯಮಗಳಿಗೆ ಸರ್ಕಾರಗಳು ಮುಕ್ತ ಪರವಾನಗಿ ನೀಡಿ ಆದಿವಾಸಿಗಳನ್ನು ಒಕ್ಕಲೆಬ್ಬಿಸುತ್ತಿದೆ. ನರ್ಮದಾ ಯೋಜನೆಯಂತಹ ಬೃಹತ್ ಯೋಜನೆಗಳು ಮತ್ತೊಂದು ಕಡೆ ಇನ್ನಷ್ಟು ಅರಣ್ಯವನ್ನು ಅದರೊಡನೆ ಆದಿವಾಸಿಗಳನ್ನು ಮುಳುಗಿಸುತ್ತಿವೆ ಹಾಗೂ ಅರಣ್ಯ ಸಂಪತ್ತಿನ ಜೀವ ವೈವಿಧ್ಯತೆಯನ್ನೇ ಬಂಡವಾಳವಾಗಿಸಿಕೊಂಡಿರುವ ಹೊಸ ವಿದೇಶಿ ಕಾರ್ಪೋರೇಟ್ ಹಿತಾಸಕ್ತಿಗಳು ಜಗತ್ತಿನಾದ್ಯಂತ 'ನ್ಯಾಷನಲ್ ಪಾರ್ಕ್', ಮೀಸಲು ಅರಣ್ಯಗಳ ಹೊಸ ರೂಪ ತಾಳಿ ಜಾರಿಗೆ ಬರುತ್ತಿವೆ.

ಹೀಗಾಗಿಯೇ ಭಾರತದಾದ್ಯಂತ ಆದಿವಾಸಿಗಳು ಕಳೆದ ಕೆಲವು ವರ್ಷಗಳಿಂದ ತಮ್ಮ ಬದುಕು ಭವಿಷ್ಯವನ್ನು ರಕ್ಷಿಸಿಕೊಳ್ಳಲು ಕದನಕ್ಕಿಳಿದಿದ್ದಾರೆ. ಆದರೆ ಜಾಗತೀಕರಣದ ಈ ಯುಗದಲ್ಲಿ ಭಾರತದ ಪ್ರಭುತ್ವ ಯಂತ್ರಾಂಗ ಹಾಗೂ ಆಳುವ ವರ್ಗಗಳು ಭಾರತದ ಜನತೆಯ ಪ್ರತಿನಿಧಿಗಳು-ಸೇವಕರೂ ಆಗುವ ಬದಲು ನವವಸಾಹತುಶಾಹಿ ಹಿತಾಸಕ್ತಿಗಳ ಸೇವಕರಾಗಿರುವುದರಿಂದ ಎಲ್ಲೆಡೆ ಆದಿವಾಸಿಗಳ ಮೇಲೆ ಬ್ರಿಟೀಷ್ ವಸಾಹತುಶಾಹಿಗಳಷ್ಟೇ ಕ್ರೂರವಾದ ದಮನ ಪ್ರಯೋಗ ಮಾಡುತ್ತಿವೆ. ಕೆನಡಾದ ಕಂಪನಿಯೊಂದು ಒರಿಸ್ಸಾದ ಕಾಶೀಪುರದಲ್ಲಿ ಅಲ್ಯುಮಿನಿಯಂ ಗಣಿಗಾರಿಕೆ ಮಾಡಲು ಆದಿವಾಸಿಗಳು ಪೋಲಿಸರ ಗುಂಡಿಗೆ ಬಲಿಯಾದರು. ನರ್ಮದಾ ಯೋಜನೆಯ ವಿರುದ್ಧ ನಡೆಸುತ್ತಿರುವ ಆದಿವಾಸಿ ಚಳವಳಿಯ ಮೇಲೆ ಲಾಠಿಚಾರ್ಜುಗಳು ಸಾಮಾನ್ಯವಾಗುತ್ತಿವೆ ಅಥವಾ ಅವರನ್ನು ಸಾಮೂಹಿಕ ಜಲಸಮಾಧಿಗೆ ತಳ್ಳಲಾಗುತ್ತಿದೆ. ಕಳೆದ ಮೂರು ವರ್ಷಗಳ ಪ್ರತ್ಯೇಕ ಘಟನೆಗಳಲ್ಲಿ ಕೋಯಿಲ್ ಕಾರೋ(ಜಾರ್ಖಂಡ್), ಮೈಕಂಚ್ (ಒರಿಸ್ಸಾ), ಮೆಹಂದಿಖೇಡಾ (ದೇವಾಸ್, ಮಧ್ಯಪ್ರದೇಶ) ಮತ್ತು ನಾಗರ್ನಾರ್ (ಛತ್ತೀಸ್‌ಗಡ)ಗಳಲ್ಲಿ ಪೋಲೀಸರು ಗೋಲಿಬಾರ್ ನಡೆಸಿದ್ದಾರೆ. ಕುದುರೆಮುಖ, ಕಳಸ, ತತ್ಕೊಳ, ಸೋಮೇಶ್ವರಗಳಲ್ಲಿನ ಆದಿವಾಸಿ ಹೋರಾಟಗಳನ್ನು ಹತ್ತಿಕ್ಕಲು ತೀವ್ರ ಪೋಲೀಸ್ ದಮನದ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಹಾಗೂ ಇತ್ತೀಚೆಗೆ ಕೇರಳದ ವೈನಾಡಿನ ಮುತುಂಗಾದಲ್ಲಿ ಆದಿವಾಸಿಗಳು ಅರಣ್ಯದ ಮೇಲಿನ ತಮ್ಮ ಹಕ್ಕನ್ನು ಪ್ರತಿಪಾದಿಸಿದ್ದಕ್ಕಾಗಿ, ಜಲಿಯನ್‌ವಾಲಾಬಾಗನ್ನು ನೆನಪಿಸುವ ರೀತಿಯಲ್ಲಿ ಪಾಶವೀ ದಮನ ನಡೆಸಿದ ಕೇರಳ ಪೋಲೀಸರು ಹಲವಾರು ಆದಿವಾಸಿಗಳನ್ನು ಕೊಂದಿದ್ದಲ್ಲದೆ, ನೂರಾರು ಆದಿವಾಸಿಗಳನ್ನು ಜೈಲುಪಾಲು ಮಾಡಿದ್ದಾರೆ. ಸುಪ್ರಿಂ ಕೋರ್ಟಿನ ಎತ್ತಂಗಡಿ ಆದೇಶವಂತೂ ದೇಶದೆಲ್ಲೆಡೆ ಆದಿವಾಸಿಗಳನ್ನು ಅಂತಿಮ ಸಂಗ್ರಾಮಕ್ಕೆ ದೂಡುತ್ತಿದೆ.

ಆತ್ಮೀಯ ಪ್ರಜ್ಞಾವಂತ ನಾಗರೀಕರೆ, ಭಾರತದ ಪ್ರಭುತ್ವ ಆದಿವಾಸಿಗಳ ಮೇಲೆ ನಡೆಸುತ್ತಿರುವ ಈ ಆಂತರಿಕ ಯುದ್ಧ ಕೇವಲ ಆದಿವಾಸಿಗಳ ಮೇಲೆ ನಡೆಸುತ್ತಿರುವ ಆಕ್ರಮಣ ಮಾತ್ರವಲ್ಲ. ವಾಸ್ತವವಾಗಿ ಇದೇ ಜಾಗತೀಕರಣದ ಹಿಂದಿನ ಶಕ್ತಿಗಳೇ ನಗರದ ಸ್ಲಂಗಳಲ್ಲಿ ಒತ್ತುವರಿ ನಡೆಸಿವೆ. ಸಾರ್ವಜನಿಕ ವಲಯದ ಉದ್ದಿಮೆಗಳ ಹರಾಜು ಹಾಕಿಸುತ್ತಿವೆ. ರೈತರನ್ನು ಆತ್ಮಹತ್ಯೆಗೆ ದೂಡುತ್ತಿವೆ. ಸಬ್ಸಿಡಿ ಹಿಂತೆಗೆದು ಬಡ ರೈತ-ಕೂಲಿಗಳನ್ನು ದಿವಾಳಿಯೆಬ್ಬಿಸುತ್ತಿದೆ. ವಿದ್ಯಾರ್ಥಿಗಳಿಗೆ ವಿದ್ಯೆ ನಿರಾಕರಿಸುತ್ತಿವೆ. ಮತ್ತೊಂದು ಕಡೆ ಬೆರಳೆಣಿಕೆಯಷ್ಟು ಮಂದಿಯ ಸ್ವತ್ತನ್ನು - ಸಂಪತ್ತನ್ನು ಹೆಚ್ಚಿಸುತ್ತಿದೆ. ಆದಿವಾಸಿಗಳ ಮೇಲಿನ ಆಕ್ರಮಣ ನಮ್ಮೆಲ್ಲರ ಮೇಲಿನ ನವವಸಾಹತುಶಾಹಿ ಆಕ್ರಮಣದ ಮುಂದುವರಿಕೆಯೇ ಆಗಿದೆ. ಅತ್ಯಂತ ಕಾಳಜಿಯಿಂದ ಗಮನಿಸಬೇಕಾದ ಅಂಶವೆಂದರೆ ಪ್ರಸ್ತುತ ಅಧಿಕಾರದಲ್ಲಿರುವ ಹಿಂದುತ್ವ ಶಕ್ತಿಗಳು ಜಾಗತೀಕರಣಕ್ಕೆ ಸಹಾಯ ಮಾಡುತ್ತಿರುವುದಷ್ಟೇ ಅಲ್ಲದೆ, ದಲಿತರು ಮತ್ತು ಆದಿವಾಸಿಗಳನ್ನು ಉಪಯೋಗಿಸಿಕೊಂಡು ಅಲ್ಪಸಂಖ್ಯಾತ ಕ್ರಿಶ್ಚಿಯನ್ ಮತ್ತು ಮುಸ್ಲಿಮರನ್ನು ಬಗ್ಗುಬಡಿಯುತ್ತಿವೆ. ಸಂಘ ಪರಿವಾರವು ವಸಾಹತುಶಾಹೀ ನೀತಿಯಾದ ಒಡೆದು ಆಳುವ ನೀತಿಯನ್ನು ಪಯೋಗಿಸಿಕೊಂಡು ಅಲ್ಪಸಂಖ್ಯಾತ ಕ್ರಿಶ್ಚಿಯನ್ ಮತ್ತು ಮುಸ್ಲಿಮರನ್ನು ಬಗ್ಗುಬಡಿಯುತ್ತಿವೆ. ಸಂಘಪರಿವಾರವು ವಸಾಹತುಶಾಹೀ ನೀತಿಯಾದ ಒಡೆದು ಆಳುವ ನೀತಿಯನ್ನು ಪ್ರಯೋಗಿಸಿಕೊಂಡು ಮತ್ತೆ ಅಧಿಕಾರದಲ್ಲಿ ಮುಂದುವರೆಯುವ ಹುನ್ನಾರದಲ್ಲಿದೆ. ವನವಾಸಿ ಕಲ್ಯಾಣ ಆಶ್ರಮ ಮತ್ತು ಕೇಸರಿ ಎನ್.ಜಿ.ಓ.ಗಳು ಭಾರತದೆಲ್ಲೆಡೆ ಆದಿವಾಸಿ ಸಮುದಾಯಗಳ ಮಧ್ಯೆ ತಮ್ಮ ಬೇರುಗಳನ್ನು ಬಿಡುತ್ತಿವೆ. ಗುಜರಾತಿನ ಕೋಮುದಳ್ಳುರಿಯ ಸಂದರ್ಭದಲ್ಲಿ ದಲಿತ ಮತ್ತು ಆದಿವಾಸಿ ಯುವಕರು ವಹಿಸಿದ ಪಾತ್ರವು ಈ ವಿಷಮಯ ಸ್ಥಿತಿಯ ಸೂಚಕವಾಗಿದೆ.

ಹೀಗಾಗಿ ಅರಣ್ಯದ ಮೇಲಿನ ಸ್ವನಿರ್ಣಯಾಧಿಕಾರಕ್ಕಾಗಿ ನಡೆಯುತ್ತಿರುವ ಆದಿವಾಸಿಗಳ ಹೋರಾಟ ನಮ್ಮೆಲ್ಲರ ಸ್ವಾತಂತ್ರ್ಯಕ್ಕಾಗಿನ ಹೋರಾಟದ ಮುಂದುವರಿಕೆಯಾಗಿದೆ. ಅದರ ಮೇಲಿನ ಪ್ರಭುತ್ವದ ದಮನ ನಮ್ಮೆಲ್ಲರ ಮೇಲಿನ ಹಾಗೂ ಪ್ರಜಾಸತ್ತಾತ್ಮಕ ಆಶಯಗಳ ಮೇಲೆ ನಡೆಯುತ್ತಿರುವ ದಮನವೇ ಆಗಿದೆ. ಆದ್ದರಿಂದಲೇ ಆದಿವಾಸಿ ಹೋರಾಟಗಳನ್ನು ಹೊರಗಿನಿಂದಲೂ ಬೆಂಬಲಿಸುವ ಜವಾಬ್ದಾರಿ ಎಲ್ಲಾ ಪ್ರಜಾತಾಂತ್ರಿಕ ಶಕ್ತಿಗಳ ಮೇಲಿದೆ.

ಈ ಜವಾಬ್ದಾರಿಯನ್ನು ಪೂರೈಸುವೆಡೆಗೆ ಒಂದು ಪುಟ್ಟ ಹೆಜ್ಜೆಯಾಗಿ ಇದೇ ಜುಲೈ 20 ರಂದು ಭಾನುವಾರ ಬೆಂಗಳೂರಿನಲ್ಲಿ 'ಆದಿವಾಸಿ ಸಮಸ್ಯೆಗಳು-ಆದಿವಾಸಿ ಹೋರಾಟಗಳು' ಬಗ್ಗೆ ಒಂದು ಸೌಹಾರ್ದತಾ ಸಭೆಯನ್ನು ಏರ್ಪಡಿಸಿದ್ದೇವೆ. ಇದರಲ್ಲಿ ಮುತುಂಗಾ, ಕಾಶೀಪುರ, ಕುದುರೆಮುಖ, ನಾಗರಹೊಳೆ ಆದಿವಾಸಿ ಹೋರಾಟಗಳ ನಾಯಕರು ಖುದ್ದಾಗಿ ಭಾಗವಹಿಸಲಿದ್ದಾರೆ. ಬೆಂಗಳೂರಿನ -ಕರ್ನಾಟಕದ ಎಲ್ಲಾ ಪ್ರಗತಿಪರ ಶಕ್ತಿಗಳು ಇದರಲ್ಲಿ ಭಾಗವಹಿಸಬೇಕೆಂಬುದು ನಮ್ಮ ಆಶಯ.

ಕುದುರೆಮುಖ ರಾಷ್ಟ್ರೀಯ ಉದ್ಯಾನ ವಿರೋಧಿ ಒಕ್ಕೂಟ-ಚಿಕ್ಕಮಗಳೂರು

(ಪ್ರಗತಿಪರರಲ್ಲಿ ಒಂದು ಮನವಿ)

ಕುದುರೆ ಮುಖ ರಾಷ್ಟ್ರೀಯ ಉದ್ಯಾನ ವಿರೋದಿ ಒಕ್ಕೂಟ - ಚಿಕ್ಕ ಮಗಳೂರು ಸಂಘಟನೆಯು ಆದಿವಾಸಿ ಗಿರಿ ಜನರ ಹೋರಾಟದಲ್ಲಿ ಕೈಜೋಡಿಸ ಬೇಕೆಂದು ಸಮಾವೇಶದ ಸಂದರ್ಭದಲ್ಲಿ ಹೊರ ತಂದ ಕರಪತ್ರವನ್ನು ಮಾನಸದ ಓದುಗರಿಗಾಗಿ ಪ್ರಕಟಿಸುತ್ತಿದೆ.

ಜನ ವಿರೋಧಿಯಾದ ಕುದುರೆಮುಖ ರಾಷ್ಟ್ರೀಯ ಉದ್ಯಾನವನ್ನು ವಿರೋಧಿಸಿ ಕಳೆದ ಐದು ವರ್ಷಗಳಿಂದ ಇಲ್ಲಿನ ಆದಿವಾಸಿ ಗಿರಿಜನರು ಹೋರಾಟ ಮುನ್ನಡೆಸಿಕೊಂಡು ಬರುತ್ತಿರುವುದು ನಿಮಗೆಲ್ಲಾ ತಿಳಿದಿದೆ ಎಂದು ಭಾವಿಸುತ್ತೇವೆ. ವನ್ಯಜೀವಿ ಸಂರಕ್ಷಣೆ, ಪರಿಸರ ಸಂರಕ್ಷಣೆಯ ಹೆಸರಿನಲ್ಲಿ ಜಾರಿಯಾಗುತ್ತಿರುವ ಈ ಯೋಜನೆ ಮೇಲ್ನೋಟಕ್ಕೆ ಪರಿಸರ ಸಂರಕ್ಷಣಾ ಯೋಜನೆ ಎನ್ನಿಸಿದರೂ ಆಳದಲ್ಲಿ ಅತ್ಯಂತ ಜನವಿರೋಧಿ ಉದ್ದೇಶಗಳನ್ನಿರಿಸಿಕೊಂಡಿದೆ. ನೂರಾರು ವರ್ಷಗಳಿಂದ ಕಾಡಿನೊಂದಿಗೆ ಸಹಬಾಳ್ವೆ ನಡೆಸಿಕೊಂಡು ಬರುತ್ತಿರುವ ಆದಿವಾಸಿಗಿರಿಜನರು, ರೈತರನ್ನು ಒಕ್ಕಲೆಬ್ಬಿಸುವುದು, ಇಲ್ಲಿನ ಅಪಾರ ಜೀವ ವೈವಿಧ್ಯ ಸಂಪನ್ಮೂಲವನ್ನು ಪೇಟೆಂಟ್ ಮೂಲಕ ಸಾಮ್ರಾಜ್ಯಶಾಹಿ ದೇಶಗಳ ಹಿತಾಸಕ್ತಿಗಳಿಗೆ ತಕ್ಕಂತೆ ಸಂರಕ್ಷಿಸಿ ಹರಾಜು ಹಾಕುವುದು. ಪ್ರವಾಸೋದ್ಯಮ "ಅಭಿವೃದ್ಧಿ" ಯೋಜನೆಗಳನ್ನು ಜಾರಿಮಾಡುವುದು ಇದರ ಹಿಂದಿನ ಮುಖ್ಯ ಉದ್ದೇಶಗಳು.

ವಾಸದ ಮನೆ-ಸಾಗುವಳಿ ಜಮೀನಿಗೆ ಹಕ್ಕು ಪತ್ರ, ಪಟ್ಟಾ ಕೊಡಬೇಕು, ಎಲ್ಲಾ ಹಳ್ಳಿಗಳಿಗೆ ಮೂಲಭೂತ ಸೌಕರ್ಯಕಲ್ಪಿಸಬೇಕು, ಆದಿವಾಸಿಗಳು ಹಾಗೂ ಒಕ್ಕೂಟದ ಕಾರ್ಯಕರ್ತರ ಮೇಲಿನ ಕೇಸುಗಳನ್ನು ವಾಪಸು ಪಡೆಯಬೇಕು, ರಾಷ್ಟ್ರೀಯ ಉದ್ಯಾನ ಯೋಜನೆಯನ್ನು ಕೈಬಿಡಬೇಕು ಎಂದು ಒತ್ತಾಯಿಸಿ ಹಲವಾರು ಧರಣಿ, ಪ್ರತಿಭಟನೆ, ಜಾಥಾ-ಸಮಾವೇಶಗಳನ್ನು ನಡೆಸಿಕೊಂಡು ಬರುತ್ತಿದ್ದೇವೆ. ಅಧಿಕಾರಿಗಳು-ಮಂತ್ರಿಗಳೊಂದಿಗೆ ವಿಧಾನಸೌಧದಲ್ಲಿ ಮಾತುಕತೆಗಳು ನಡೆದಿದೆ. ಆದರೆ ಯಾವ ಬೇಡಿಕೆಯನ್ನೂ ಪರಿಹರಿಸುವ ಪ್ರಯತ್ನಗಳಿಗೆ ಸರ್ಕಾರಗಳು ಮುಂದಾಗಿಲ್ಲ.

ಸರ್ಕಾರ ತನ್ನ ನಾಗರಿಕ ಜವಾಬ್ದಾರಿಯನ್ನು ನಿರ್ವಹಿಸದೇ ನಿರ್ಲಕ್ಷ್ಯ ಮಾಡುತ್ತಿದ್ದರೆ, ವನ್ಯಜೀವಿ ಇಲಾಖೆ ಅಧಿಕಾರಿಗಳು-ಪೊಲೀಸರು ಹೋರಾಟ ನಿರತ ಆದಿವಾಸಿಗಳ ಮೇಲೆ ಸುಳ್ಳು ಕೇಸುಗಳನ್ನು ದಾಖಲಿಸಿ, ಕೋರ್ಟಿಗೆ ಅಲೆಯುವಂತೆ ಮಾಡುತ್ತಿದ್ದಾರೆ. ಇತ್ತೀಚೆಗೆ ಶಂಕಿತ ನಕ್ಸಲೀಯರ ಪತ್ತೆ ಮಾಡುವ ಕಾರ್ಯಾಚರಣೆಯ ಹೆಸರಲ್ಲಿ ಆದಿವಾಸಿ ಗಿರಿಜನರ ಮೇಲೆ ಪೊಲೀಸರು ದೌರ್ಜನ್ಯ ನಡೆಸುತ್ತ ಮಾನಸಿಕ ಕಿರುಕುಳ ನೀಡುತ್ತಿದ್ದಾರೆ. ಒಳಗೆ ವನ್ಯಜೀವಿ ಇಲಾಖೆಯ ನಿರ್ಬಂಧ ಹೊರಗೆ ಪೊಲೀಸರ ದೌರ್ಜನ್ಯ ಹೀಗೆ ಆದಿವಾಸಿಗಿರಿಜನರನ್ನು ಎಲ್ಲಾ ರೀತಿಯಲ್ಲೂ ನಿರ್ಬಂಧಿಸಿ ಅವರ ಬದುಕುವ ಹಕ್ಕು, ಮಾನವಹಕ್ಕುಗಳನ್ನೆಲ್ಲ ಹತ್ತಿಕ್ಕಲಾಗುತ್ತಿದೆ. ಒಕ್ಕೂಟದ ಹೋರಾಟಗಳಲ್ಲಿ ಭಾಗವಹಿಸುವ ಆದಿವಾಸಿಗಿರಿಜನರನ್ನು ಬೆದರಿಸುವ ಮೂಲಕ ಅವರ ಪ್ರಜಾತಾಂತ್ರಿಕ ಹಕ್ಕುಗಳನ್ನು ನಿರಾಕರಿಸುತ್ತಿದ್ದಾರೆ.

ಆದಿವಾಸಿಗಳ, ರೈತರ ಬದುಕು-ಭವಿಷ್ಯದ ರಕ್ಷಣೆಗಾಗಿ ನಡೆಯುತ್ತಿರುವ ಈ ಹೋರಾಟವನ್ನು ಎಂದೂ ಬೆಂಬಲಿಸದ ಸಂಘಪರಿವಾರ ಉದ್ಯಾನ ವ್ಯಾಪ್ತಿಯಲ್ಲಿ ನಡೆಯುತ್ತಿದೆ ಎನ್ನಲಾದ ಶಂಕಿತ ನಕ್ಸಲೀಯ ಚಟುವಟಿಕೆ ಒಕ್ಕೂಟ-ಕರ್ನಾಟಕ ವಿಮೋಚನ ರಂಗ ಪ್ರಚೋದನೆ ನೀಡುತ್ತಿವೆ ಎಂದು ಅಪ ಪ್ರಚಾರದಲ್ಲಿ ತೊಡಗಿದೆ. ಪ್ರಜಾತಾಂತ್ರಿಕ ನೆಲೆಯಲ್ಲಿ ಮುನ್ನಡೆಯುತ್ತಿರುವ ಆದಿವಾಸಿ ಹೋರಾಟವನ್ನು ದಿಕ್ಕುತಪ್ಪಿಸುವ ಪ್ರಯತ್ನ ನಡೆದಿದೆ.

ಕು.ರಾ.ಉ.ರಾಷ್ಟ್ರೀಯ ಉದ್ಯಾನ ವಿರೋಧಿ ಚಳುವಳಿಯನ್ನು ಆರಂಭದಿಂದಲೂ ನಾಡಿನ ಹಲವಾರು ಪ್ರಗತಿಪರರು, ಸಾಹಿತಿಗಳು, ಬುದ್ಧಿಜೀವಿಗಳು ಬೆಂಬಲಿಸುತ್ತಿದ್ದಾರೆ. ಕಳೆದ ವರ್ಷ ಶೃಂಗೇರಿಯಲ್ಲಿ ನಡೆದ

ಆದಿವಾಸಿಗಳ ಬೃಹತ್ ಸಮಾವೇಶದಲ್ಲಿ ನರ್ಮದಾ ಬಚಾವೋ ಆಂದೋಲನದ ನಾಯಕಿ ಮೇಧಾಪಾಟ್ಕರ್, ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಎಚ್.ಎಸ್.ದೊರೆಸ್ವಾಮಿಯವರೂ ಸೇರಿದಮತೆ ಹಲವಾರು ಪ್ರಗತಿಪರರು ಭಾಗವಹಿಸಿ ಬೆಂಬಲಿಸಿದ್ದರು.

ಇದೇ ಸೆ.23 ರಂದು ಶೃಂಗೇರಿಯಲ್ಲಿ ಉದ್ಯಾನ ವ್ಯಾಪ್ತಿಯ ಆದಿವಾಸಿಗಿರಿಜನರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಬೃಹತ್ ಪ್ರತಿಭಟನಾ ಸಮಾವೇಶವೊಂದನ್ನು ಹಮ್ಮಿಕೊಳ್ಳಲಾಗಿದೆ. ಈ ಸಮಾವೇಶಕ್ಕೆ ಭಾರತ ಸರ್ಕಾರದ ಪರಿಶಿಷ್ಟಜಾತಿ - ಪರಿಶಿಷ್ಟವರ್ಗಗಳ ಆಯೋಗದ ಮಾಜಿ ಆಯುಕ್ತರೂ, ಭಾರತದ ಜನಾಂದೋಲನ ಸಂಘಟನೆಯ ಮುಖ್ಯಸ್ಥರೂ ಆಗಿರುವ ಶ್ರೀ ಬಿ.ಡಿ.ಶರ್ಮಾರವರು ಆಗಮಿಸಲಿದ್ದಾರೆ. ನಾಡಿನ ಹಲವಾರು ಪ್ರಗತಿಪರರು ಭಾಗವಹಿಸಲಿದ್ದಾರೆ.

> ಮಹಿಳೆಯರ ಬೇಡಿಕೆಗಳನ್ನು ಕುರಿತು ಪ್ರಮುಖರೆನಿಸಿದ ರಾಷ್ಟ್ರೀಯವಾದಿಗಳೂ ಅಷ್ಟೇ ನಿರ್ಲಕ್ಷ್ಯ ಮಾಡಿದರು. ಅವರ ಕಾರಣಗಳು ಮಾತ್ರ ಬೇರೆಯದಿತ್ತಷ್ಟೆ. ಸ್ತ್ರೀ ಶಿಕ್ಷಣದ ಬಗೆಗೆ, ಸಾಮಾಜಿಕ ಸಂಸ್ಥೆಗಳನ್ನು ಕಟ್ಟುವ ಬಗ್ಗೆ ಭಾರತದ ಪುರುಷರು ಪೂರ್ಣ ಬೆಂಬಲವನ್ನಿತ್ತರೂ, ಮಹಿಳೆಯರು ತಾವು ಮುಂದೆ ನಿಂತು ಪಿತೃಪ್ರಧಾನ ಸಮಾಜದ ದೋಷಗಳನುನ ಕುರಿತು ಮಾತನಾಡತೊಡಗಿದ್ದು ಅವರಿಗೆ ಪ್ರಿಯವೆನಿಸಲಿಲ್ಲ. ಈವರೆಗೆ ಮೌನವಹಿಸಿದ್ದ ಮಹಿಳೆಯರು ಸಮಾಜದ ನಿರೀಕ್ಷಿತ ಸ್ಥಿರ ಮಾದರಿಗಳಲ್ಲಿ ತೆಪ್ಪಗೆ ಅಮಾಯಕರಾಗಿ, ಗುಲಾಮರಾಗಿ ನಡೆದು ಬಂದಿದ್ದರು. ಈಗ ಅವರು ತಮ್ಮ ಸಂಕಟಗಳನ್ನು ಮುಕ್ತವಾಗಿ ಹೇಳಿಕೊಳ್ಳ ತೊಡಗಿದ್ದು ದೊಡ್ಡ ದೋಷವಾಗಿ ಕಂಡಿತು. ಅವರು 'ಸಂಸ್ಕೃತಿ ನಿಷ್ಠರಲ್ಲ' ಎಂಬ ಬಿರುದನ್ನು ಪಡೆಯಬೇಕಾಯಿತು.
>
> **ಆಧುನಿಕ ಭಾರತದಲ್ಲಿ ಮಹಿಳೆ**
> **ಡಾ.ಎಚ್.ಎಸ್.ಶ್ರೀಮತಿ**

'ಅಮೆರಿಕದಲ್ಲಿ ಕೌಟುಂಬಿಕ ಹಿಂಸೆ'

ಮೊದಲ ಬಾರಿ ಪತಿ ಹೊಡೆದಾಗ, ಏನೋ ಒಂದು ಬಾರಿಯ ಅತಿಕ್ರಮಣ ಎಂದು ರೋಹಿಣಿ ನಂಬಿಯಾರ್ ಆಲೋಚಿಸಿದಳು. ಆದರೆ ಅದು ಅಲ್ಲಿಗೇ ನಿಲ್ಲಲಿಲ್ಲ. ಹೊಡೆತ, ಬಡಿತ, ಅಳು ಎಂಬುದು ಮನೆಯಲ್ಲಿ ಮಾಮೂಲಿ ಸಂಗತಿಯಾಗ ತೊಡಗಿತು. ಪ್ರತಿ ಬಾರಿಯೂ 'ಪ್ರಚೋದನೆ' ಗೆ ಏನಾದರೂ ನೆಪ ಸಿಗುತ್ತಿತ್ತು. ಅವರ ಕ್ರೆಡಿಟ್ ಕಾರ್ಡ್‌ನಲ್ಲಿ ರೋಹಿಣಿ ಸ್ವಲ್ಪ ಹೆಚ್ಚು ಖರ್ಚು ಮಾಡಿದ್ದು ಭಾರತದಲ್ಲಿರುವ ತಾಯಿ ಜತೆ ತುಂಬಾ ಹೊತ್ತು ಮಾತಾಡಿದ್ದು, ಗೆಳತಿಯರ ಜತೆ ಹೊರ ಹೋಗಿದ್ದು ಇಂತಹದೇ ಕ್ಷುಲ್ಲಕ ಸಂಗತಿಗೂ ಹೊಡೆತಕ್ಕೆ ಕಾರಣವಾಗುತ್ತಿತ್ತು. ಪ್ರತಿ ಬಾರಿಯೂ ಇದು ಒಂದೇ ರೀತಿ ಅಂತ್ಯವಾಗುತ್ತಿತ್ತು. 'ಕೆಲಸದ ಒತ್ತಡ' ವನ್ನು ದೂಷಿಸುತ್ತಾ ಆತ ಆಕೆಯ ಕ್ಷಮೆ ಕೋರುವುದಾಗಿ ನಡೆದೇ ಇತ್ತು. ನಿಜ, ಹೊರಗೆ ಕಾಣಿಸುವುದಕ್ಕೆ ನಂಬಿಯಾರ್ ದಂಪತಿಗಳದು ಕನಸಿನ ಸುಖೀ ಸಂಸಾರ. ಆತ ಕಾರ್ಪೋರೇಟ್ ವಲಯದಲ್ಲಿ ಮೇಲೇರುತ್ತಲೇ ಹೋಗುತ್ತಿದ್ದ; ಆಕೆಗೂ ಆಕೆಯದೇ ಒಳ್ಳೆಯ ಕೆಲಸವಿತ್ತು. 'ಇನ್ನೂ ಇದನ್ನು ನಾನು ಸಹಿಸುವುದಿಲ್ಲ ಎಂದು ಧೈರ್ಯ ಮಾಡುವುದಕ್ಕೇ ನನಗೆ ಆರು ವರ್ಷ ಹಿಡಿಸಿತು' ಎಂದು ರೋಹಿಣಿ ಹೇಳುತ್ತಾರೆ. ಒಂದು ದಿನ ತನ್ನ ಸಾಮಾನುಗಳನ್ನೆಲ್ಲ ಪ್ಯಾಕ್ ಮಾಡಿ ಪತಿಯ ದಶಲಕ್ಷ ಡಾಲರ್ ಮನೆಯನ್ನು ತೊರೆದು ಬಂದೇ ಬಿಟ್ಟರು. 'ಈ ನಿರ್ಧಾರ ಅಷ್ಟು ಸುಲಭದ್ದಾಗಿರಲಿಲ್ಲ. ಏಕೆಂದರೆ ನನಗೆ ಮಗನಿದ್ದ ಮತ್ತೂ ದೊಡ್ಡ ಸಮಸ್ಯೆ ಎಂದರೆ ನನ್ನ ಸ್ನೇಹಿತರು, ಬಂಧುಗಳಿಗೆಲ್ಲಾ, ನನಗೆ ಹೇಗೆ ಆಗುತ್ತಿತ್ತೆಂಬುದನ್ನು ಹೇಳಿ ನಂಬಿಸುವ ಕಷ್ಟ ಏಕೆಂದರೆ ಬಹಳಷ್ಟು ಜನರಂತೆ, ಆಕೆಯ ಸ್ನೇಹಿತರೂ ದಕ್ಷಿಣ ಏಷ್ಯಾ ಸಮುದಾಯದವರಲ್ಲಿ ಕೌಟುಂಬಿಕ ಹಿಂಸೆ ಇಲ್ಲವೇ ಇಲ್ಲ ಎಂದೇ ನಂಬಿದ್ದರು. ಅದೂ ನಂಬಿಯಾರ್‌ರಂತಹ ಸುಶಿಕ್ಷಿತ, ಶ್ರೀಮಂತ ದಕ್ಷಿಣ ಏಷ್ಯಾನ್ನರಲ್ಲಿ ! ನಂಬುವುದೇ ಅಸಾಧ್ಯ ಸಂಗತಿಯಾಗಿತ್ತು ಅವರಿಗೆಲ್ಲಾ'.

ಆದರೆ ಈ ಪ್ರದೇಶದಲ್ಲಿ ದಕ್ಷಿಣ ಏಷ್ಯಾನ್ನರಲ್ಲಿರುವ ಕೌಟುಂಬಿಕ ಹಿಂಸಾಚಾರದ ವಿರುದ್ಧ ಹೋರಾಡುತ್ತಿರುವ ಸ್ಯಾನಾಫ್ರಾನ್ಸಿಸ್ಕೊ ಪ್ರದೇಶದ ಪ್ರಮುಖ ಸಂಘಟನೆ 'ಮೈತ್ರಿ'ಯ ಕಾರ್ಯಕ್ರಮ ನಿರ್ದೇಶಕಿ ನಳಿನಿ ಶೇಖರ್‌ಗೆ ಇದರಲ್ಲೇನೂ ಅಚ್ಚರಿ ಇಲ್ಲ. 'ಕೌಟುಂಬಿಕ ಹಿಂಸಾಚಾರ ಬರೀ ಬಡವರ ಮನೆಗಳಲ್ಲಾಗುತ್ತದೆ ಎಂಬುದು ಸಾಮಾನ್ಯವಾಗಿ ತಪ್ಪು ಪರಿಕಲ್ಪನೆ ; ಆದರೆ ಎಲ್ಲಾ ಸಾಮಾಜಿಕ-ಆರ್ಥಿಕ ವರ್ಗಗಳವರಲ್ಲೂ ಇದು ಇದೆ ಎಂಬುದು ವಾಸ್ತವ ಎನ್ನುತ್ತಾರೆ' ಅವರು.

'ಬಡವರಿಗಿರುವ ಖಾಸಗಿ ಜಾಗ ಕಡಿಮೆಯಾದುದು. ಹೀಗಾಗಿ ಮನೆಯಲ್ಲಿ ಸ್ವಲ್ಪವೇ ಹಿಂಸೆ ನಡೆದರೂ ಅದು ತಕ್ಷಣವೇ ಸಾರ್ವಜನಿಕರಿಗೆಲ್ಲಾ ತಿಳಿಯುತ್ತದೆ. ಆದರೆ

'ಗೌರವಾನ್ವಿತ' ಬದುಕು ನಡೆಸುತ್ತಿರುವ ಬಹು ಶ್ರೀಮಂತರನ್ನೊಳಗೊಂಡ ಪ್ರಕರಣಗಳೇ ನಿಜವಾಗಿಯೂ ಕ್ಲಿಷ್ಟವಾದುದು' ಎಂದು ಅವರು ಹೇಳುತ್ತಾ. 'ಮೈತ್ರಿ'ಗೆ ಬರುವ ಮಹಿಳೆಯರ ವಯಸ್ಸು 17 ರಿಂದ 70ರಷ್ಟಿರುತ್ತದೆ. ಮೊದಲ ಬಾರಿಗೆ ದೌರ್ಜನ್ಯಕ್ಕೀಡಾದ ಮಹಿಳೆಯರಿಂದ ಹಿಡಿದು ದಶಕಗಳ ಕಾಲ, ಹಿಂಸಿಸುವ ಸಂಗಾತಿಯೊಂದಿಗೆ ಬದುಕು ಸವೆಸಿದವರು ; ಹೊಸದಾಗಿ ಅಮೆರಿಕಗೆ ಬಂದವರು ಅಥವಾ ಎರಡನೇ ಪೀಳಿಗೆಯ ಭಾರತೀಯ ಅಮೆರಿಕನ್ನರು ; ಅಶಿಕ್ಷಿತ ಮಹಿಳೆಯರು, ಜತೆಗೆ ಉನ್ನತ ಶಿಕ್ಷಣ ಪಡೆದ ವೃತ್ತಿ ಪರ ಮಹಿಳೆಯರು ; ಇಂಗ್ಲಿಷ್ ಬಾರದವರು, ಜೊತೆಗೆ ಅತ್ಯಾಧುನಿಕರಾದ ಕಾಸ್ಮೊಪಾಲಿಟನ್ ಮಹಿಳೆಯರು" ಎಂದು ಪ್ರಧಾನ ಕಾರ್ಯದರ್ಶಿ ಮುಕ್ತಾ ಸಾರಂಗಪಾಣಿ ನುಡಿಯುತ್ತಾರೆ.

ಇದು ಮಹಿಳೆ ಹೆಚ್ಚು ಸುಶಿಕ್ಷಿತಳಾಗಿ ಆರ್ಥಿಕವಾಗಿ ಸ್ವತಂತ್ರಳಾದರೆ ತನ್ನ ಹಕ್ಕುಗಳನ್ನು ರಕ್ಷಿಸಿಕೊಳ್ಳುವುದು ಸುಲಭವಾಗುತ್ತದೆ ಎಂಬಂತಹ ನಂಬಿಕೆಯನ್ನೇ ಛಿದ್ರಗೊಳಿಸುತ್ತದೆ. ಸಾಮಾಜಿಕವಾಗಿ ನೀವು ಮೇಲಿದ್ದಷ್ಟೂ ಕಳೂಕವೂ ಹೆಚ್ಚು. ಸುಶಿಕ್ಷಿತಳಾಗಿದ್ದು, ಒಳ್ಳೆಯ ಸಂಬಳ ಬರುವ ಕೆಲಸದಲ್ಲಿದ್ದು, ಸಾರ್ವಜನಿಕವಾಗಿ ಮೇಲ್ಮಟ್ಟದಲ್ಲಿದ್ದರಂತೂ ತನ್ನ ಖಾಸಗಿ ಬದುಕಿನಲ್ಲಿ ನಿಯಂತ್ರಣ ಇಲ್ಲದಿರುವುದೇ ಹೆಚ್ಚು. ಕಡೆಗೆ ಇದರಿಂದ ಸಿಗುವ ಫಲಿತಾಂಶ ? ವರ್ಷಾನುಗಟ್ಟಲೆ ಹಿಂಸೆಯನ್ನು ಸಹಿಸುತ್ತಾ ಕೂರುವುದು. ಈ ಹಿಂಸೆಗೆ ತನ್ನದೇನೂ ತಪ್ಪಿಲ್ಲ, ಎಷ್ಟೇ ಪ್ರಯತ್ನಿಸಿದರೂ ಇದು ಸರಿಯಾಗುವುದಿಲ್ಲ ಎಂಬ ಅರಿವು ಅಥವಾ ವಾಸ್ತವವನ್ನು ಕಂಡುಕೊಳ್ಳುವವರೆಗೂ ಈ ಹಿಂಸೆ ಸಹಿಸಿಕೊಳ್ಳುವುದು ಮುಂದುವರಿದಿರುತ್ತದೆ.

.ಮೂರು ವರ್ಷಗಳ ಕಾಲ ತನ್ನ ಬಾಯ್‌ಫ್ರೆಂಡ್ ಜತೆಗೆ ದೌರ್ಜನ್ಯದ ಸಂಬಂಧ ಹೊಂದಿದ್ದ ನೀರಜಾ ಪಟೇಲ್ ಅನುಭವದಿಂದ ಮಾತನಾಡುತ್ತಾರೆ. ಎರಡನೇ ಪೀಳಿಗೆಯ ಭಾರತೀಯ-ಅಮೆರಿಕನ್ ಹಾಗೂ ನ್ಯೂಯಾರ್ಕ್‌ನ ಸಾರ್ವಜನಿಕ ಸಂಪರ್ಕ ಸಂಸ್ಥೆಯಲ್ಲಿ ಎಕ್ಸಿಕ್ಯುಟಿವ್ ಆಗಿದ್ದ ಶೇಖರ್ ಜತೆಗೆ ಓಡಾಡಲು ಆರಂಭಿಸಿದಾಗ ಅಪ್ಪ ಅಮ್ಮನಿಗೆ ಆರಂಭದಲ್ಲಿ ಸ್ವಲ್ಪ ಬೇಜಾರಾಗಿತ್ತು. ಹಿರಿಯರು ಏರ್ಪಡಿಸಿದ ಮದುವೆಗೆ ತಾನು ಒಳಪಡುತ್ತಿಲ್ಲ ಎಂಬುದು ಅವರ ಬೇಜಾರಿಗೆ ಕಾರಣವಾಗಿತ್ತು. ಆದರೆ ಸ್ವಲ್ಪ ದಿನಗಳಲ್ಲೇ ಶೇಖರ್‌ನನ್ನು ಅವರು ತುಂಬಾ ಇಷ್ಟಪಡತೊಡಗಿದರು. ಗೆಳತಿಯರಂತೂ ಶೇಖರ್‌ನನ್ನು ಆರಾಧಿಸುತ್ತಿದ್ದರು. ಆದರೆ ಸ್ವಲ್ಪ ಸಮಯದಲ್ಲೇ ನೀರಾಜಗೆ, ಶೇಖರ್‌ನ ಕತ್ತಲ ಮುಖಗಳ ಪರಿಚಯವಾಗ ತೊಡಗಿತು. 'ಪ್ರತಿ ಬಾರಿ ಆತನಿಗೆ ನನ್ನ ಮೇಲಿನ ಆತನ ಹಿಡಿತ ತಪ್ಪುತ್ತಿದೆ ಎಂದಾಗಲೆಲ್ಲಾ ಆತನ ಮನಸ್ಥಿತಿ ಹದಗೆಡುತ್ತಿತ್ತು'. 'ನನ್ನ ಮೇಲೆ ನಿಯಂತ್ರಣ ಸಾಧಿಸುವ ಹುಚ್ಚು ಅಷ್ಟೊಂದು. ಪ್ರತಿ ಬಾರಿ ಜಗಳವಾದಾಗಲೆಲ್ಲಾ ನನ್ನನ್ನು ಹೊಡೆಯುವುದರಲ್ಲಿ ಅಂತ್ಯವಾಗುತ್ತಿತ್ತು'. ಆಕೆಯ ಮನಸ್ಸಿನ ಒಂದು ಎಳೆ ಈ ಸಂಬಂಧದಿಂದ ಹೊರ ಹೋಗು ಎಂದೇ ಪದೇ ಪದೇ ಹೇಳುತ್ತಿದ್ದರೂ, ಸತ್ಯಗೊತ್ತಾದಲ್ಲಿ ಜಗತ್ತನ್ನು ಎದುರಿಸುವುದು ಕಷ್ಟ ಎಂಬ ಭೀತಿ ನೀರಜಾಳನ್ನು ಕಾಡುತ್ತಿತ್ತು.

ಮಹಿಳೆಯ ಮೇಲೆ ನಡೆಸುವ ದೌರ್ಜನ್ಯ ಬರೀ ದೈಹಿಕ ಹಿಂಸಾಚಾರಕ್ಕಷ್ಟೇ ಸೀಮಿತವೇ ? ಆತ್ಮೀಯ ಸಹಬಾಳ್ವೆಯ ಸಂಬಂಧದಲ್ಲಿ ಯಾವುದೇ ದೈಹಿಕ, ಭಾವನಾತ್ಮಕ ಹಾಗೂ ಆರ್ಥಿಕ ದೌರ್ಜನ್ಯಗಳನ್ನು ಕೌಟುಂಬಿಕ ಹಿಂಸಾಚಾರ ಎಂದು ಅಮೆರಿಕ ಕಾನೂನು ಹೇಳುತ್ತದೆ. ದೈಹಿಕ ದೌರ್ಜನ್ಯವನ್ನು ವಿವರಿಸಬಹುದು. ಆದರೆ ಭಾವನಾತ್ಮಕ ದೌರ್ಜನ್ಯವನ್ನು ವಿವರಿಸುವುದು ತುಂಬಾ ಕಷ್ಟ. ಈ ಪರಿಕಲ್ಪನೆ ಮಹಿಳೆಯಿಂದ ಮಹಿಳೆಗೆ ಬದಲಾಗುತ್ತದೆ. ಆದರೆ ದೌರ್ಜನ್ಯದ ರೀತಿಯಲ್ಲಿ ಒಂದು ಸಾಮಾನ್ಯ ಅಂಶವೂ ಇದೆ. ದೋಷವನ್ನು ಹೆಣ್ಣಿನ ಮೇಲೇ ಹೊರಿಸುತ್ತಾ, ಆಕೆಯ ಆತ್ಮಾಭಿಮಾನದ ಮೇಲೆ ಹಲ್ಲೆ ಮಾಡುವುದು ಮಾಮೂಲು. ಆಕೆಯ ಮೇಲೆ ಪ್ರಚೋದನೆಯ ಆರೋಪಗಳನ್ನು ಹೊರಿಸುತ್ತಾ, ಆಕೆಯ ಸ್ನೇಹಿತರು ಕುಟುಂಬದವರಿಂದ ಆಕೆಯನ್ನು ದೂರವಾಗಿಸುತ್ತಾ, ಆಕೆಯ ಓಡಾಟಗಳನ್ನು ನಿರ್ಬಂಧಿಸುವುದು ಮಾಮೂಲು. ಆಕೆಯ ಕ್ರೆಡಿಟ್ ಕಾರ್ಡ್‌ಗಳನ್ನು, ಡ್ರೈವಿಂಗ್ ಲೈಸೆನ್ಸ್‌ಗಳನ್ನು ಕಸಿದುಕೊಳ್ಳುವುದು, ಟೆಲಿಫೋನ್‌ನಲ್ಲಿ ಮಾತನಾಡಲೂ ಬಿಡದಂತೆ ಆಕೆಯನ್ನು ನಿರ್ಬಂಧಿಸುವುದೂ ಸಾಮಾನ್ಯ ಎಂದು ನಳಿನಿ ಶೇಖರ್ ಹೇಳುತ್ತಾರೆ.

ಹಾಗಿದ್ದರೆ, ಲೈಂಗಿಕ ಹಿಂಸಾಚಾರದ ವಿಚಾರ ಏನು ? ಆದರಿಂದ ಹೆಚ್ಚು ವ್ಯಕ್ತವಾಗದ, ಹೆಚ್ಚು ಹೇಳಿಕೊಳ್ಳದ ವಿಚಾರವಾಗಿಯೇ ಉಳಿದಿದೆ ಎಂಬುದು ನಳಿನಿ ಅಭಿಪ್ರಾಯ. 'ದಕ್ಷಿಣ ಏಷ್ಯನ್ ಸಮುದಾಯದಲ್ಲಿ ವಿವಾಹದೊಳಗಿನ ಅತ್ಯಾಚಾರ ಅಂಗೀಕೃತವಾದದು' ಸುರಕ್ಷ ತನ್ನ ವೈವಾಹಿಕ ಹಕ್ಕುಗಳನ್ನು ಪ್ರತಿಪಾದಿಸುವ ಪರಿ ಅದು ಎಂದೇ ಪರಿಗಣಿಸಲಾಗುತ್ತದೆ. ಆದರೆ ಬಹಳ ಮಂದಿಗೆ ಗೊತ್ತಿಲ್ಲದ ವಿಚಾರ ಎಂದರೆ, ಅಮೆರಿಕದಲ್ಲಿ ಅದನ್ನು ಕಾನೂನಿನಡಿ ಶಿಕ್ಷೆಗೆ ಒಳಪಡುವ ಲೈಂಗಿಕ ದುರ್ವರ್ತನೆ ಎಂದು ಪರಿಗಣಿಸಲಾಗುತ್ತದೆ ಎಂಬುದು.

ಬಹುತೇಕ ಪ್ರಕರಣಗಳಲ್ಲಿ ಒಟ್ಟಾರೆ ದೌರ್ಜನ್ಯದ ಅಂಗವಾಗಿಯೇ ಲೈಂಗಿಕ ದೌರ್ಜನ್ಯವೂ ಇರುತ್ತದೆ ಎಂಬುದು ಮುಕ್ತಾ ಸಾರಂಗಪಾಣಿ ಅಭಿಪ್ರಾಯ. 'ನಮ್ಮಲ್ಲಿ ಬರುವ ಅನೇಕ ಮಂದಿ ಹಿಂಸಾಚಾರದ ಇತರ ರೂಪಗಳ ಜತೆಗೆಯೇ ಲೈಂಗಿಕ ಹಿಂಸೆಯನ್ನು ಅನುಭವಿಸುತ್ತಿದ್ದಂತಹವರು. ಹೀಗಾಗಿ ಇತರ ಹಿಂಸಾಚಾರ ರೂಪಗಳ ವಿರುದ್ಧ ಹೋರಾಡುತ್ತಲೇ ಸಂಬಂಧಗಳನ್ನು ನಿರ್ವಹಿಸುವುದು ಹೇಗೆ ಎಂಬುದನ್ನು ಕಂಡುಕೊಳ್ಳುತ್ತಾರೆ' ಎಂದು ಅವರು ವಿವರಿಸುತ್ತಾರೆ.

"ನಾವು ಲೈಂಗಿಕ ದೌರ್ಜನ್ಯ, ಬಲಾತ್ಕಾರದ ವೇಶ್ಯಾವಾಟಿಕೆ, ಅಪ್ರಾಪ್ತ ವಯಸ್ಸಿನ ಹೆಣ್ಣುಮಕ್ಕಳನ್ನು ಬಲವಂತದಿಂದ ಮದುವೆ ಮಾಡುವ ಪ್ರಯತ್ನಗಳ ಪ್ರಕರಣಗಳನ್ನೂ ನೋಡಿದ್ದೇವೆ " ಎಂದು ಮುಕ್ತಾ ಹೇಳುತ್ತಾರೆ. ಇಂತಹ

ಪ್ರಕರಣಗಳನ್ನೂ ಬಹಿರಂಗಗೊಳಿಸುವುದೂ ಕಷ್ಟ. ಅವನ್ನೆಲ್ಲಾ ಬಹಳ ಚೆನ್ನಾಗಿ ಮುಚ್ಚಿಡಲಾಗುತ್ತದೆ. 'ಮಹಿಳೆಯೊಬ್ಬಳನ್ನು ಭಾರತದಿಂದ ಅಗ್ಗದ ಶ್ರಮದ ಹೆಸರಲ್ಲಿ ಇಲ್ಲಿಗೆ ತಂದಿರಬಹುದು. ಆ ನಂತರ ಆಕೆಯನ್ನು ಲೈಂಗಿಕವಾಗಿ ಶೋಷಣೆಗೊಳಪಡಿಸಿರಬಹುದು. ಈ ರಾಷ್ಟ್ರದ ಕಾನೂನು ಅರಿವಿರದೇ ಇರುವುದರಿಂದ ಆಕೆಯು ಕಾನೂನುಜಾರಿ ಅಧಿಕಾರಿಗಳ ಬಳಿ ಹೋಗುವುದಿಲ್ಲ. ಜತೆಗೆ ವೀಸಾ ಕಳೆದುಕೊಳ್ಳುವ ಭಯವೂ ಆಕೆಗಿರುತ್ತದೆ' ಎಂದೂ ಮುಕ್ತಾ ಹೇಳುತ್ತಾರೆ. ಇಂತಹ ಪ್ರಕರಣಗಳು ಕೌಟುಂಭಿಕ ಹಿಂಸೆ ಪರಿಧಿಗೂ ಬರುವುದಿಲ್ಲ ; 'ಲೈಂಗಿಕ ದೌರ್ಜನ್ಯದಡಿ ಈ ಪ್ರಕರಣಗಳನ್ನೂ ನಿರ್ವಹಿಸಬೇಕು. ಈ ಕುರಿತಂತೆಯೂ ಅಮೆರಿಕದಲ್ಲಿ ಕಟ್ಟುನಿಟ್ಟಿನ ಕಾನೂನುಗಳಿವೆ.

ಕತೆಯಲ್ಲಿ, ಪದೇ ಪದೇ ಕಾಡುವ ಪ್ರಶ್ನೆ : ಉತ್ತರ ಅಮೆರಿಕಾದಲ್ಲಿರುವ ದಕ್ಷಿಣ ಏಷ್ಯಾನವರಲ್ಲಿ ಕೌಟುಂಬಿಕ ಹಿಂಸೆ ಎಷ್ಟು ಮಾಮೂಲಾಗಿದೆ ? ಇದು ದಿನನಿತ್ಯದ ಸಂಗತಿ ಎನ್ನುವಷ್ಟು ಮಾಮೂಲಾಗಿದೆ ಎಂಬುದು ನಳಿನಿ ಹಾಗೂ ಮುಕ್ತಾ ಅವರ ಅಭಿಪ್ರಾಯ. ಹಲವು ಪ್ರಕರಣಗಳು ವರದಿಯಾಗುವುದೇ ಇಲ್ಲ. ಅಪರಾಧಿ ಪ್ರಜ್ಞೆ, ಪಾಪಪ್ರಜ್ಞೆ, ಮತ್ತಿತರ ಸಾಂಸ್ಕೃತಿಕ ಮೌಲ್ಯಗಳ ಭಯಗಳ ನೆರಳಲ್ಲಿ ಈ ಮಹಿಳೆಯರು ನರಳುತ್ತಾರೆ ಕುಟುಂಬ ಒಡೆಯಲು ತಮ್ಮನ್ನೇ ಕಾರಣರಾಗಿಸುತ್ತಾರೆಂದೂ ಅವರು ಹೆದರುತ್ತಾರೆ. 'ಆದರೆ 'ಮೈತ್ರಿ' ಕಳೆದ ವರ್ಷ 1000 ಕರೆಗಳನ್ನು ನಿರ್ವಹಿಸಿದೆ. ಪ್ರತಿ ತಿಂಗಳೂ ಸುಮಾರು 65 ಮಹಿಳೆಯರು ನೋವಿನ ಕಥೆಗಳನ್ನು ಹೇಳಿಕೊಳ್ಳಲು 'ಮೈತ್ರಿ' ಬಳಿ ಬರುತ್ತಾರೆಂದರೆ ಎಲ್ಲವೂ ಇಲ್ಲಿ ಸುಗಮವಾಗಿಲ್ಲ ಎಂದಾಯಿತು ಎಂದೂ' ಮುಕ್ತಾ ಹೇಳುತ್ತಾರೆ.

ಹಲವು ಕೌಟುಂಬಿಕ ಹಿಂಸೆ ಪ್ರಕರಣಗಳು 'ವಲಸೆ'ಗೆ ಸಂಬಂಧಿಸಿದ ವಿಚಾರಗಳಾಗಿಯೇ ವರದಿಯಾಗುವುದಿಲ್ಲ.

1994 ರಲ್ಲಿ ಕಾಂಗ್ರೆಸ್‌ನಿಂದ ಅಂಗೀಕೃತವಾದ ಮಹಿಳೆಯರ ವಿರುದ್ಧ ಹಿಂಸಾಚಾರ ಕಾಯಿದೆ (VAWA-ವಾವಾ)ಯ ಅನ್ವಯ, ಅಮೆರಿಕ ನಾಗರಿಕರು ಅಥವಾ ಶಾಸನಾತ್ಮಕ ಕಾಯಂ ನಿವಾಸಿ (LPR) ಗಳ ಪತ್ನಿ ಮಕ್ಕಳು, ಶಾಸನಾತ್ಮಕ ಕಾಯಂ ವಾಸದ ಸ್ಥಾನಮಾನ ಪಡೆದುಕೊಳ್ಳಲು ಸ್ವಂತವಾಗೇ ಅರ್ಜಿಸಲ್ಲಿಸಬಹುದು. ದೌರ್ಜನ್ಯ ಎಸಗುವವನಿಂದ ಸುರಕ್ಷೆ ಹಾಗೂ ಸ್ವಾತಂತ್ರ್ಯ ಪಡೆದುಕೊಳ್ಳುವುದಕ್ಕಾಗಿ, ದೌರ್ಜನ್ಯದಾ-ರನಿಗೆ ಗೊತ್ತಿಲ್ಲದೆಯೇ, ಆತನ ಸಹಕಾರವಿಲ್ಲದೆಯೇ ದೌರ್ಜನ್ಯಕ್ಕೊಳಗಾದ ವಲಸಿತ ಮಹಿಳೆಯರು ವಲಸೆ ಪರಿಹಾರಕ್ಕಾಗಿ ಅರ್ಜಿಸಲ್ಲಿಸಲು 'ವಾವಾ' ಕಾಯಿದೆ ಅನ್ವಯ ಅವಕಾಶವಿದೆ. ಕೌಟುಂಬಿಕ ಹಿಂಸೆಗೊಳಗಾದವರು ರಾಷ್ಟ್ರೀಯ ಕೌಟುಂಬಿಕ ಹಿಂಸೆ ಹಾಟ್‌ಲೈನ್ (800) ಗೂ ಕರೆ ಮಾಡಿ, ಲಭ್ಯವಿರುವ ಆಶ್ರಯ ತಾಣ, ಮಾನಸಿಕ ಆರೋಗ್ಯ ಕೇಂದ್ರ, ಕಾನೂನು ಸಲಹೆ ಇತ್ಯಾದಿಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಬಹುದು.

ಮೇಲಿನ ವರ್ಗಕ್ಕೆ ಸೇರದ ಮಹಿಳೆಯರು ಎಂದರೆ ಪತಿಯಿಂದಿರು, ಹಸಿರು ಕಾರ್ಡ್ ಹೊಂದಿಲ್ಲದಂತಹವರಾಗಿದ್ದರೆ 'ಯು' ವೀಸಾ ಉತ್ತರವಾಗುತ್ತದೆ. 'ಯು'ವೀಸಾ ಎಂಬುದು ಮೂರು ವರ್ಷಗಳ ಕಾಲದ ವಲಸೆಣರೇತರ ವೀಸಾವಾಗಿರುತ್ತದೆ. ಇದು ದೌರ್ಜನ್ಯಕ್ಕೊಳರಾದ ವ್ಯಕ್ತಿಗಳು ತನಿಖೆಗೆ ಸಹಕರಿಸಲು ಅಮೆರಿಕದಲ್ಲೇ ಉಳಿಯಲು ಅವಕಾಶ ಮಾಡುತ್ತದೆ. ಮೂರು ವರ್ಷಗಳ ನಂತರ, ಕೆಲವು ಅರ್ಹತಾ ಅಗತ್ಯಗಳನ್ನೂ ಪೂರೈಸಿದಲ್ಲಿ ಅರ್ಜಿದಾರರು ಹಸಿರು ಕಾರ್ಡ್‌ದಾರರೂ ಅರ್ಜಿ ಸಲ್ಲಿಸ ಬಹುದು. 'ಯು ' ವೀಸಾ ಅರ್ಜಿದಾರರು ಅತ್ಯಾಚಾರ, ಅಪಹರಣ, ಕೌಟುಂಬಿಕ ಹಿಂಸೆ, ಆಕ್ರಮಣ, ಜೀತ, ಲೈಂಗಿಕ ಜೀತ ಇತ್ಯಾದಿ ಕಾರಣಗಳಿಂದ ದೈಹಿಕ - ಮಾನಸಿಕ ದೌರ್ಜನ್ಯಕ್ಕೆ ಒಳಗಾಗಿರುವುದನ್ನೂ ಸಾಬೀತು ಪಡಿಸಬೇಕಾಗುತ್ತದೆ.

ಮಾನವ ಸಾಗಣೆ ಹಾಗೂ ದೌರ್ಜನ್ಯಕ್ಕೊಳಗಾದವರ ಸಂರಕ್ಷಣೆ ಕಾಯಿದೆಯ ಭಾಗವಾಗಿ ಆಗಿನ ಅಧ್ಯಕ್ಷ ಬಿಲ್‌ಕ್ಲಿಂಟನ್ 2000 ರ ಅಕ್ಟೋಬರ್ ತಿಂಗಳಲ್ಲಿ ಈ 'ಯು' ವೀಸಾವನ್ನು ಸಾಕ್ಷಿ ಮಾಡಲಾಯಿತು. ಆದರೆ ಇನ್ನೂ ಈ ವೀಸಾದ ಅನುಷ್ಠಾನ ನಿಯಮಗಳು ಜಾರಿಯಾಗಿಲ್ಲ. ಹೀಗಾಗಿ ಇದು ಒದಗಿಸುವ ಪೂರ್ಣ ಸುರಕ್ಷತೆಯನ್ನು ಬಳಸಿಕೊಳ್ಳುವಲ್ಲಿ ವೈಫಲ್ಯ ಕಂಡು ಬಂದಿದೆ. ಸದ್ಯದ ಆಡಳಿತ ಹೊಸ ನಿಯಮಗಳನ್ನು ಜಾರಿಗೊಳಿಸಿದಲ್ಲಿ, ದೌರ್ಜನ್ಯಕ್ಕೊಳಗಾದವರ ಪರವಾಗಿ ಹೊಸ ಕಾರ್ಯವಿಧಾನಗಳನ್ನೂ ವಕೀಲರು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ.

'ಗ್ರೇಟರ್ ಬಾಸ್ಟನ್‌ನಲ್ಲಿ ದಕ್ಷಿಣ ಏಷ್ಯಾ, ಮಹಿಳೆಯರ ವಿರುದ್ಧ ಆತ್ಮೀಯ ಸಂಗಾತಿಯ ಹಿಂಸಾಚಾರ ಕುರಿತು ಒಂದು ಅಧ್ಯಯನ ನಡೆಸಲಾಗಿದೆ. ಈ ಅಧ್ಯಯನ ಕೈಗೊಂಡವರು ಬೊಸ್ಟನ್ ವಿಶ್ವವಿದ್ಯಾನಿಲಯದ ಅನಿತಾರಾಜ್ ಹಾಗೂ ಹಾರ್ವರ್ಡ್ ವಿಶ್ವ ವಿದ್ಯಾಲಯದ ಜೇಸಿಲ್ವರ್ ಮ್ಯಾನ್. ಅಮೆರಿಕನ್ ಮೆಡಿಕಲ್ ವಿಮೆನ್ಸ್ ಅಸೋಸಿಯೇಷನ್‌ನ 2002 ರ ಏಪ್ರಿಲ್ ಸಂಚಿಕೆಯಲ್ಲಿ ಈ ಅಧ್ಯಯನ ಪ್ರಕಟವಾಗಿದೆ. ಈ ಪ್ರಕಾರ 1998ರಲ್ಲಿ ಬೋಸ್ಟನ್ ಪ್ರದೇಶದಾದ್ಯಂತ ನಡೆಸಿದ ದಕ್ಷಿಣ ಏಷ್ಯಾ ಮಹಿಳೆಯರ ಸಮೀಕ್ಷೆಯ ಪ್ರಕಾರ, 160 ದಕ್ಷಿಣ ಏಷ್ಯಾ ಮಹಿಳೆಯರಲ್ಲಿ ಶೇಕಡಾ 40 ರಷ್ಟು ಮಂದಿ ಪುರುಷ ಸಂಗಾತಿಯಿಂದ ದೌರ್ಜನ್ಯಕ್ಕೊಳಗಾಗಿದ್ದರು. ಇದರಲ್ಲಿ ಶೇ.75ಮಂದಿ ವಿವಾಹಿತರು. ಅರ್ಧಕ್ಕೂ ಹೆಚ್ಚು ಮಂದಿಗೆ ಮಕ್ಕಳಿದ್ದರು', ದೈಹಿಕ ದೌರ್ಜನ್ಯದಲ್ಲಿ ಲೈಂಗಿಕ ದೌರ್ಜನ್ಯವೂ ಸೇರಿದೆ ಎಂಬುದಾಗಿಯೂ ಶೇಕಡಾ ಮೂರನೇ ಎರಡರಷ್ಟು ಮಂದಿ ಬಹಿರಂಗ ಪಡಿಸಿದ್ದಾರೆ.

(ದೌರ್ಜನ್ಯಕ್ಕೊಳಗಾದವರ ಹೆಸರುಗಳನ್ನು ಬದಲಿಸಲಾಗಿದೆ)

- ಕಮಲಿಕಾ ಬ್ಯಾನರ್ಜಿ

('ಇಂಡಿಯಾ ಕರೆಂಟ್ಸ್' 18 ಏಪ್ರಿಲ್ 2003)

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

ವಾರ್ಷಿಕ ಚಂದಾ : 100 ರೂ

ಸಂಸ್ಥೆಗಳಿಗೆ : 150 ರೂ

ಸಂ.ಮಂಡಳಿ

REGD No. : CPMG/KA/BGE/289/2003 - 05

BOOK-POST
PRINTED MATTER



Manjula C.G., No. 4, Vaishaka,
2nd cross, Marakam road,
Ashok nagar, Bangalore-25.

ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067